

# IWAY (ಐವೇ)

## ಸ್ಟ್ಯಾಂಡರ್ಡ್

ಈ ದಾಖಲೆಯು IWAY(ಐವೇ)ಯ ಸಾಮಾನ್ಯ ವಿಭಾಗದ, , ಆವೃತ್ತಿ 6.0 ರ ಅನುವಾದವಾಗಿದೆ. ಈ ಅನುವಾದವು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಮತ್ತು ಇದನ್ನು ಒಪ್ಪಂದದ ದಾಖಲೆಯಾಗಿ ನೋಡಲಾಗುವುದಿಲ್ಲ.ಇಂಗ್ಲಿಷ್ ಆವೃತ್ತಿಯು ಏಕೈಕ ಅಧಿಕೃತ ದಾಖಲೆಯಾಗಿದ್ದು , ಇತರ ವಿವಾದಗಳು ಮತ್ತು ಭಿನ್ನಾಭಿಪ್ರಾಯಗಳ ವ್ಯತ್ಯಾಸಗಳ ಸಂದರ್ಭದಲ್ಲಿ ಉಲ್ಲೇಖಿಸಬೇಕಾದದ್ದಾಗಿದೆ.

**ಉತ್ಪನ್ನಗಳು, ಸೇವೆಗಳು, ವಸ್ತುಗಳು ಮತ್ತು ಭಾಗಗಳನ್ನು ಜವಾಬ್ದಾರಿಯುತವಾಗಿ ಸಂಗ್ರಹಿಸಲಾಗುವ *The IKEA*(ದಿ ಐಕಿಯಾ) ದ ವಿಧಾನ**

**IWAY (ಐವೇ) ಸ್ಟಾಂಡರ 6.0 ಆವೃತ್ತಿಗಳು ಸೆಪ್ಟೆಂಬರ್ 2019 ಪ್ರಕಟಣೆ Inter IKEA Systems B.V.2019**
**(ಇಂಟರ್ ಐಕಿಯಾ ಸಿಸ್ಟಂಗಳು ಬಿ.ವಿ. 2019)**



# ವಿಷಯಗಳು


| | |
|---|---|
| ಪರಿಚಯ | p. 3 |
| **IWAY (ಐವೇ) ತತ್ವಗಳು** | p. 9 |
| ಸಾಮಾನ್ಯ ವಿಭಾಗ<br>*(ಎಲ್ಲಾ ಸರಬರಾಜುದಾರರಿಗೆ ಅವಶ್ಯಕತೆಗಳು)* | p. 10 |

ಹೆಚ್ಚುವರಿ ವಿಭಾಗಗಳು

*(ಸರಬರಾಜುದಾರರಿಗೆ ನಿರ್ದಿಷ್ಟ ಅವಶ್ಯಕತೆಗಳು ಪ್ರತ್ಯೇಕ ದಾಖಲೆಗಳ ರೂಪದಲ್ಲಿ ದೊರಕುತ್ತವೆ)*

- ವಸತಿ ವಿಭಾಗ
- ಪ್ರಾಣಿ ಯೋಗಕ್ಷೇಮ ವಿಭಾಗ
- ಅರಣ್ಯಪ್ರದೇಶ ವಿಭಾಗ
- ಸಾರಿಗೆ ವಿಭಾಗ

p.3 - IWAY STANDARD 6.0 / © Inter IKEA Systems B.V. 2019 (p.3 - ಐವೇ ಸ್ಟಾಂಡರ್ಡ್ 6.0 / © ಇಂಟರ್ ಐಕಿಯಾ ಸಿಸ್ಟಂಗಳು ಬಿ.ವಿ.2019)



# The IKEA(ದಿ ಐಕಿಯಾ) ವಿಷನ್ ಅಸಂಖ್ಯ ಜನತೆಗೆ ಉತ್ತಮ ದೈನಂದಿನ ಜೀವನವನ್ನು ರೂಪಿಸುವುದು

**ಈ ದಾಖಲೆಯ ಉದ್ದೇಶಕ್ಕೆ, "ನಾವು" ಎಂದರೆ IKEA(ಐಕಿಯಾ) ಬ್ರಾಂಡ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಂಸ್ಥೆಗಳು, ಮತ್ತು "ನೀವು" ಎಂದರೆ ಯಾವುದೇ IKEA(ಐಕಿಯಾ) ಸಂಸ್ಥೆಗೆ ಯಾವುದೇ *ಸರಬರಾಜುದಾರರು* ಎಂದರ್ಥ.**

**ನಾವು ("IKEA") ("ಐಕಿಯಾ") ನಮ್ಮ ವಿಷನ್ ಹಂಚಿಕೊಳ್ಳುವ *ಸರಬರಾಜುದಾರರು*, ಸೇವೆ ಒದಗಿಸುವವರು ಮತ್ತು ಇತರ ಗುತ್ತಿಗೆ ಪಕ್ಷಗಳೊಂದಿಗೆ (ಇನ್ನು ಮುಂದೆ, "*ಸರಬರಾಜುದಾರರು*") ದೀರ್ಘಕಾಲೀನ ಸಂಬಂಧ ನಿರ್ಮಿಸಲು ಬಯಸುತ್ತೇವೆ. ಆದಕ್ಕಾಗಿಯೇ ನಾವು ಜವಾಬ್ದಾರಿಯುತವಾಗಿ ಉತ್ಪನ್ನಗಳು, ಸೇವೆಗಳು, ಸಾಮಗ್ರಿಗಳು ಮತ್ತು ಸಲಕರಣೆಗಳನ್ನು ಸಂಗ್ರಹಿಸುವ the IKEA(ದಿ ಐಕಿಯಾ) ವಿಧಾನದಲ್ಲಿ, IWAY(ಐವೇ)ಯನ್ನು ಅಭಿವೃದ್ಧಿಪಡಿಸಿದ್ದೇವೆ.**

IWAY(ಐವೇ) ನಾವು ನಿಮ್ಮಿಂದ ಒಬ್ಬ *ಸರಬರಾಜುದಾರರಾಗಿ* IKEA(ಐಕಿಯಾ) ಮೌಲ್ಯ *ಸರಪಳಿಯಲ್ಲಿ* ಕೆಳಕಂಡ ಸಂದರ್ಭಗಳಲ್ಲಿ ಏನನ್ನು ನಿರೀಕ್ಷಿಸುತ್ತೇವೆ ಎಂಬುದನ್ನು ವಿವರಿಸುತ್ತದೆ ಜನರು, ಭೂಮಿ ಮತ್ತು ಪ್ರಾಣಿಪಕ್ಷಿಗಳನ್ನು ನೋಡಿಕೊಳ್ಳುವುದು.

IWAY (ಐವೇ) ಜೊತೆ ಕಾರ್ಯನಿರ್ವಹಿಸಿರುವ ನಮಗೆ ಜನರು, ಭೂಮಿ ಮತ್ತು ಪ್ರಾಣಿಪಕ್ಷಿಗಳನ್ನು ಗೌರವದಿಂದ ನೋಡಿಕೊಂಡಾಗ, ಕಾರ್ಮಿಕರು ಹೆಚ್ಚು ಉತ್ಪಾದಕತೆ ಸಾಧಿಸುತ್ತಾರೆ, ಸಂಪನ್ಮೂಲಗಳನ್ನು ಹೆಚ್ಚು ದಕ್ಷತೆಯಿಂದ ಬಳಸಲಾಗುತ್ತದೆ, ಮತ್ತು ವ್ಯಾಪಾರವು ಸಮೃದ್ಧವಾಗುತ್ತದೆ ಎನ್ನುವುದನ್ನು ತೋರಿಸಿಕೊಟ್ಟಿದೆ. ನಮ್ಮ ಗ್ರಾಹಕರೂ ಲಾಭ ಹೊಂದುತ್ತಾರೆ - IKEA (ಐಕಿಯಾ) ಮಾರಾಟ ಮಾಡುವ ಎಲ್ಲಾ ಉತ್ಪನ್ನಗಳನ್ನು ಜವಾಬ್ದಾರಿಯುತವಾಗಿ ತಯಾರಿಸಿ, ಸಾಗಿಸಿ, ತಲುಪಿಸಿ ಮತ್ತು ಜೋಡಿಸಲಾಗುತ್ತದೆ ಮತ್ತು ಅಂಗಡಿಗಳಲ್ಲಿ, ಗ್ರಾಹಕರ ಟಚ್ ಪಾಯಿಂಟುಗಳಲ್ಲಿ ಮತ್ತು ಉತ್ಪಾದನಾ ಸ್ಥಳಗಳಲ್ಲಿ ನಮ್ಮ *ಸರಬರಾಜುದಾರರು* ಉತ್ತಮ ಸಾಮಾಜಿಕ, ಪರಿಸರದ ಮತ್ತು ಪ್ರಾಣಿ ಯೋಗಕ್ಷೇಮ ಪರಿಸ್ಥಿತಿಗಳನ್ನು ಕಾಯ್ದುಕೊಳ್ಳುತ್ತಾರೆ ಎಂದು ತಿಳಿದುಕೊಂಡಾಗ.

IWAY (ಐವೇ) ಜೊತೆ ಕೆಲಸ ಮಾಡುವಾಗ, ನಾವು ನಿರಂತರವಾಗಿ ಕೆಳಗಿನ ಪ್ರಶ್ನೆಗಳ ಮೂಲಕ ಮಾರ್ಗದರ್ಶನ ಪಡೆಯುತ್ತೇವೆ:












# IKEA (ಐಕಿಯಾ)ದ ಮೌಲ್ಯ ಸರಪಣಿಯ ಎಲ್ಲಾ ಹಂತಗಳಲ್ಲಿ ನಾವು ಕೆಳಕಂಡ ಅಂಶಗಳ ಬಗ್ಗೆ ದೃಢ ನಿರ್ಧಾರ ಮಾಡಿದ್ದೇವೆ ಜವಾಬ್ದಾರಿಯುತವಾದ ಬೆಂಬಲ ಸಂಗ್ರಹಣಾ ತತ್ವಗಳು

IWAY (ಐವೇ) ಪೂರೈಸಲು ಬದ್ಧರಾಗುವ ಮೂಲಕ, ನಿಮ್ಮಿಂದ ಕೆಳಗಿನ ಅಂಶಗಳನ್ನು ಸುಭದ್ರಗೊಳಿಸುವ ನಿರೀಕ್ಷೆಯಿದೆ:

**ಜವಾಬ್ದಾರಿ**
ನೀವು ಸದಾಕಾಲ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾನೂನುಗಳು, ಹಾಗೂ IWAY (ಐವೇ) ಸ್ಟಾಂಡರ್ಡ್-ನಲ್ಲಿ ವಿವರಿಸಿರುವ IWAY (ಐವೇ)ಯ ಎಲ್ಲಾ ಕಡ್ಡಾಯ ಮತ್ತು IWAY (ಐವೇ)ಯ ಮೂಲ (BASIC) ಅವಶ್ಯಕತೆಗಳನ್ನು ಪಾಲಿಸಲು ಜವಾಬ್ದಾರರಾಗಿರುತ್ತೀರಿ.

**ಮುಕ್ತ ನಡವಳಿಕೆ**
ನೀವು ಸುಧಾರಣೆಯ ಅವಶ್ಯಕತೆ ಇರುವ ಪ್ರದೇಶಗಳ ಬಗ್ಗೆ ಮುಕ್ತ ಮತ್ತು ಪ್ರಾಮಾಣಿಕರಾಗಿರುವಿರಿ

**ನಿರಂತರ ಸುಧಾರಣೆ**
IWAY (ಐವೇ) ಸ್ಟಾಂಡರ್ಡ್ ಜಾರಿಗೊಳಿಸಲು ಬೇಕಾಗುವ ಸಮಯ ಮತ್ತು ಪ್ರಯತ್ನವನ್ನು ನಾವು ಗುರುತಿಸುತ್ತೇವೆ ಮತ್ತು ನೀವು ಕಾರ್ಯಾಚರಣೆಯನ್ನು ಬಲಪಡಿಸಲು ನಿರಂತರ ಸುಧಾರಣಾ ಮನಸ್ಥಿತಿಯನ್ನು ಅಳವಡಿಸಿಕೊಳ್ಳಲು ಮತ್ತು ಅವಶ್ಯವಿದ್ದಂತೆ, IWAY (ಐವೇ) ಮೂಲ ಅವಶ್ಯಕತೆಗಳನ್ನು ದಾಟಿ ಶ್ರಮಿಸುವುದನ್ನು ಪ್ರೋತ್ಸಾಹಿಸುತ್ತೇವೆ.



# ನಮ್ಮ ಕಾರ್ಯಾಚಟುವಟಿಕೆಗಳು ಬದಲಾವಣೆಯನ್ನು ಕೂಡ ಮಾಡುತ್ತದೆಯೆಂದು ನಾವು ಗುರುತಿಸುತ್ತೇವೆ.

ನಾವು ನಿಮ್ಮೊಂದಿಗೆ ಹೇಗೆ ಕೆಲಸ ಮಾಡುತ್ತೇವೆ ಎನ್ನುವ ಬಗ್ಗೆ ನ್ಯಾಯಸಮ್ಮತ ಮತ್ತು ಮಕ್ತ ವಿಧಾನವನ್ನು ಅನುಸರಿಸಲು ಶ್ರಮಿಸುತ್ತೇವೆ. ಇದರರ್ಥ:

**ಹೊಂದಾಣಿಕೆ**
ನಾವು ನಿಮ್ಮಿಂದ ಬಯಸುವ ರೀತಿಯಲ್ಲಿಯೇ ಆಂತರಿಕವಾಗಿ ಅದೇ ನಿರೀಕ್ಷೆಗಳ ಮಟ್ಟ ತಲುಪುವ ಗುರಿ ಹೊಂದಿದ್ದೇವೆ.

**ಸಂಭಾಷಣೆ**
ಮುಕ್ತ ಸಂವಹನೆಯನ್ನು ನಾವು ನಮ್ಮ ಎಲ್ಲಾ ಸರಬರಾಜುದಾರರೊಂದಿಗೆ ಹೊಂದಿರುತ್ತೇವೆ ಮತ್ತು ನಮ್ಮ ಕಾರ್ಯಾಚರಣೆ ಮತ್ತು ನಡವಳಿಕೆಯ ಬಗ್ಗೆ ನೀವು ಹೊಂದಿರಬಹುದಾದ ಯಾವುದೇ ಪ್ರತಿಕ್ರಿಯೆಯನ್ನು ಸ್ವಾಗತಿಸುತ್ತೇವೆ.

**ಬೆಂಬಲ**
ಸಾಧ್ಯವಿದ್ದಡೆ, ನಿಮ್ಮದೇ ಆದ ಸ್ವಂತ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಲು, IWAY (ಐವೇ) ಸ್ಟಾಂಡರ್ಡ್ ಅನುಸಾರ ಪೂರೈಸಲು ಮತ್ತು ನಿರಂತರವಾಗಿ ಸುಧಾರಿಸಲು ನಿಮ್ಮ ಕಾರ್ಯಾಚರಣೆಗಳಿಗೆ ಹೊಂದಿಕೊಳ್ಳುವ ಕಾರ್ಯಸಾಧ್ಯ ಬೆಂಬಲವನ್ನು ನೀಡುತ್ತೇವೆ.



# The IWAY (ದಿ ಐವೇ) ತತ್ವಗಳು ಮತ್ತು ಅವಶ್ಯಕತೆಗಳು ಅಂತರರಾಷ್ಟ್ರೀಯವಾಗಿ ಮಾನ್ಯತೆ ಪಡೆದಿರುವ ಮಾನಕಗಳು ಮತ್ತು ತತ್ವಗಳನ್ನು ಆಧಾರಿಸಿವೆ

ಇವುಗಳು ವ್ಯಾಪಾರ ಮತ್ತು ಮಾನವ ಹಕ್ಕುಗಳ (UNGPs) ಮೇಲಿನ UN ಮಾರ್ಗದರ್ಶನ ತತ್ವಗಳಿಗೆ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ ಮತ್ತು ಅವುಗಳು UN ವಿಶ್ವ ಒಪ್ಪಂದದ ಹತ್ತು ತತ್ವಗಳನ್ನು ಆಧಾರಿಸಿವೆ. ನಮ್ಮ ಅವಶ್ಯಕತೆಗಳನ್ನು ಅಭಿವೃದ್ಧಿಪಡಿಸುವಲ್ಲಿ, ನಾವೂ ಸಹ ಇತರ ದಾಖಲೆಗಳ ಪೈಕಿ UN ಸಮರ್ಥನೀಯ ಅಭಿವೃದ್ಧಿ ಗುರಿಗಳು (SDGs) ಮತ್ತು ಕೆಲಸದ ಭವಿಷ್ಯಕ್ಕಾಗಿ ILO ಶತಮಾನ ಘೋಷಣೆಯ ಮಾರ್ಗದರ್ಶನ ಹೊಂದಿರುತ್ತೇವೆ.

IWAY (ಐವೇ)ಯನ್ನು ಕೆಳಕಂಡ ಅಂಶಗಳ ಆಧಾರದ ಮೇಲೆ ರಚಿಸಲಾಗಿದೆ:

**ತತ್ವಗಳು**
ಈ ತತ್ವಗಳು ಉತ್ಪನ್ನಗಳು, ಸೇವೆಗಳು, ಸಾಮಗ್ರಿಗಳು ಮತ್ತು ಸಲಕರಣೆಗಳನ್ನು ಜವಾಬ್ದಾರಿಯುತವಾಗಿ ಸಂಗ್ರಹಿಸುವುದರ ಮೇಲಿನ IKEA (ಐಕಿಯಾ) ನಿಲುವನ್ನು ವಿವರಿಸುತ್ತವೆ.

**ವಿಭಾಗಗಳು**
ವಿಭಾಗಗಳು IWAY (ಐವೇ) ಅವಶ್ಯಕತೆಗಳನ್ನು ಗುಂಪುಗಳಾಗಿ ವಿಂಗಡಿಸುತ್ತವೆ ಮತ್ತು ಅವುಗಳು ಸರಬರಾಜುದಾರರ ಚಟುವಟಿಕೆಗಳು ಅಥವಾ ಸ್ವರೂಪವನ್ನು ಆಧಾರಿಸಿ ಅನ್ವಯವಾಗುತ್ತವೆ.

**IWAY (ದಿ ಐವೇ) ಅವಶ್ಯಕತೆಗಳು**

**ಕಡ್ಡಾಯ(MUST)**

ವ್ಯಾಪಾರ ನಿರ್ವಹಿಸುವಾಗ ಸದಾಕಾಲ ಪೂರೈಸಬೇಕಾದ ಅವಶ್ಯಕತೆಗಳು.

**ಮೂಲ(BASIC)**

ಪ್ರಥಮ ಡೆಲಿವರಿ ಅಥವಾ ಸೇವೆಯ 12 ತಿಂಗಳೊಳಗೆ ಅವಶ್ಯಕತೆಗಳನ್ನು ಪೂರೈಸಬೇಕು.

**ಆಧುನಿಕ(ADVANCE)**

ಕನಿಷ್ಠ ಪಾಲನೆಯನ್ನು ಮೀರಿ ಹೋಗುವ ಮತ್ತು ಹೆಚ್ಚಿನ ಸಮರ್ಥನೀಯ ಅಭ್ಯಾಸಗಳತ್ತ ಹೆಚ್ಚುವರಿ ಕ್ರಮಗಳನ್ನು ವಿವರಿಸುವ ಅವಶ್ಯಕತೆಗಳು.
ಇವುಗಳು ಸಂಬಂಧಿತ IKEA (ಐಕಿಯಾ) ಸಂಸ್ಥೆಯು ರೂಪಿಸಿರುವ ಆದ್ಯತೆಗಳನ್ನು ಆಧಾರಿಸಿ ಅನ್ವಯ ಆಗಬಹುದು ಅಥವಾ ಅನ್ವಯ ಆಗದಿರಬಹುದು.

**ಉತ್ಕೃಷ್ಟ(EXCELLENT)**

ಕನಿಷ್ಠ ಪಾಲನೆಯನ್ನು ಮೀರಿ ಹೋಗುವ ಮತ್ತು ಹೆಚ್ಚಿನ ಸಮರ್ಥನೀಯ ಅಭ್ಯಾಸಗಳತ್ತ ಹೆಚ್ಚುವರಿ ಕ್ರಮಗಳನ್ನು ವಿವರಿಸುವ ಅವಶ್ಯಕತೆಗಳು.
ಇವುಗಳು ಸಂಬಂಧಿತ IKEA (ಐಕಿಯಾ) ಸಂಸ್ಥೆಯು ರೂಪಿಸಿರುವ ಆದ್ಯತೆಗಳನ್ನು ಆಧಾರಿಸಿ ಅನ್ವಯ ಆಗಬಹುದು ಅಥವಾ ಅನ್ವಯ ಆಗದಿರಬಹುದು.

ಬಹಳ ಒತ್ತಾಯಪೂರ್ವಕವಾಗಿರುವ ಅವಶ್ಯಕತೆಗಳನ್ನು ಅವುಗಳು ಕಾನೂನಾತ್ಮಕವೋ ಅಥವಾ IWAY (ಐವೇ) ಅವಶ್ಯಕತೆಗಳೋ, ಯಾವಾಗಲೂ ಪಾಲಿಸಲಾಗುತ್ತದೆ. IWAY (ಐವೇ) ಅವಶ್ಯಕತೆಗಳು ಅನ್ವಯವಾಗುವ ಕಾನೂನುಗಳು ಅಥವಾ ನಿಯಂತ್ರಣಗಳಿಗೆ ತದ್ವಿರುದ್ಧ ಆಗಿದ್ದರೆ, ಕಾನೂನನ್ನು ಪಾಲಿಸಲಾಗುತ್ತದೆ ಮತ್ತು ಅದು ಪ್ರಸ್ತುತವಾಗುತ್ತದೆ. ಅಂತಹ ಪ್ರಕರಣಗಳಲ್ಲಿ, IKEA (ಐಕಿಯಾ)ಗೆ ತಕ್ಷಣ ಮಾಹಿತಿ ನೀಡಲಾಗುತ್ತದೆ ಮತ್ತು IWAY (ಐವೇ) ಅವಶ್ಯಕತೆಯನ್ನು ಗೌರವಿಸುವ ಬದಲಿ ಮಾರ್ಗಗಳನ್ನು ಹುಡುಕಲಾಗುತ್ತದೆ.

**ನಾವು ಅವಶ್ಯಕತೆಗಳು ಮತ್ತು ಕಾರ್ಯ ವಿಧಾನಗಳ ಸೌಹಾರ್ದತೆಯನ್ನು ಮುನ್ನಡೆಸುವ ಕ್ರಮಗಳನ್ನು ಪ್ರೋತ್ಸಾಹಿಸುತ್ತೇವೆ.**

IKEA (ಐಕಿಯಾ) ಸರಬರಾಜದಾರರು ತಮ್ಮದೇ ಆದ ನಡವಳಿಕೆ ಸಂಹಿತೆಯನ್ನು ಹೊಂದಿರಬಹುದು, ಮತ್ತೊಬ್ಬ ಖರೀದಿದಾರರ ನಡವಳಿಕೆ ಸಂಹಿತೆಯನ್ನು ಬಳಸಿ ಕೆಲಸ ಮಾಡಬಹುದು ಅಥವಾ IWAY (ಐವೇ) ಗೆ ಹೋಲಿಸಬಹುದಾದ ಸಮರ್ಥಿಸಿಕೊಳ್ಳುವಿಕೆ ಯೋಜನೆಯ ಅನುಸಾರ ಪ್ರಮಾಣ ಪತ್ರ ಹೊಂದಿರಬಹುದು ಎಂಬುದನ್ನು ಒಪ್ಪುತ್ತದೆ. IKEA (ಐಕಿಯಾ) IWAY (ಐವೇ) ಅವಶ್ಯಕತೆಗಳನ್ನು ಜಾರಿಗೊಳಿಸಲು ಬದಲಿ ಕ್ರಮಗಳನ್ನು ಬೆಂಬಲಿಸುತ್ತದೆ. IKEA (ಐಕಿಯಾ) ಅಂತಹ ಕ್ರಮಗಳು ಸಮನಾದ ಕ್ರಮಗಳೇ ಎಂದು ನಿರ್ಧರಿಸುವ ಹಕ್ಕನ್ನು ಕಾದಿರಿಸುತ್ತದೆ.

**IWAY (ಐವೇ) ಯಶಸ್ವೀ ಜಾರಿಗೊಳಿಸುವಿಕೆಯು ಸಹಕಾರ, ಪರಸ್ಪರ ವಿಶ್ವಾಸ ಮತ್ತು ಗೌರವದ ಮೇಲೆ ಅವಲಂಬಿತವಾಗಿದೆ**

ಎಲ್ಲಾ ಅವಲೋಕನಗಳು, ಚರ್ಚೆಗಳು ಮತ್ತು ನಿಮ್ಮಿಂದ ಸ್ವೀಕರಿಸುವ ಮಾಹಿತಿಯನ್ನು IKEA (ಐಕಿಯಾ), ಅದರ ಸಹ-ಕಾರ್ಮಿಕರು ಮತ್ತು IKEA (ಐಕಿಯಾ) ನೇಮಿಸಿರುವ ಯಾವುದೇ ತೃತೀಯ ಸಂಸ್ಥೆಯಿಂದ ಪಕ್ಷದಿಂದ ಗೌಪ್ಯವಾಗಿ ಪರಿಗಣಿಸಲಾಗುತ್ತದೆ. IWAY (ಐವೇ)ಗೆ ಸಂಬಂಧಿಸಿದಂತೆ ಸಂಗ್ರಹಿಸಿರುವ ಯಾವುದೇ ಅಂಕಿಅಂಶವನ್ನು ಗೌರವಯುತವಾಗಿ ಮತ್ತು IWAY (ಐವೇ) ಜೊತೆಗಿನ ಹೊಂದಾಣಿಕೆಯನ್ನು ಪರಿಶೀಲಿಸುವ ಏಕೈಕ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

**IWAY (ಐವೇ) ಸ್ಟಾಂಡರ್ಡ್-ನ ಅಧಿಕೃತ ಭಾಷೆಯು ಇಂಗ್ಲೀಷ್ ಆಗಿರುತ್ತದೆ**

IWAY (ಐವೇ) ಸ್ಟಾಂಡರ್ಡ್-ನ ಭಾಷಾಂತರಗಳನ್ನು ಮಾಹಿತಿಯ ಉದ್ದೇಶಗಳಿಗಾಗಿ ಮಾತ್ರ ಒದಗಿಸಲಾಗಿದೆ, ಮತ್ತು ಅದನ್ನು ಗುತ್ತಿಗೆಯ ದಾಖಲಾತಿ ಎಂದು ಅವಲಂಬಿತವಾಗಲು ಸಾಧ್ಯವಿಲ್ಲ. ಇಂಗ್ಲೀಷ್ ಆವೃತ್ತಿಯು ಮಾತ್ರ ಏಕೈಕ ಗುತ್ತಿಗೆಯ ದಾಖಲಾತಿ ಆಗಿದೆ ಮತ್ತು ಯಾವುದೇ ದ್ವಂದ್ವಗಳು ಅಥವಾ ದೋಷಗಳ ಪ್ರಕರಣದಲ್ಲಿ ಮಾತ್ರ ಪ್ರಸ್ತುತವಾಗಿರುತ್ತವೆ.

**ಗ್ಲಾಸರಿ / ಶಬ್ದ ಕೋಶ**

*italics* ನಲ್ಲಿ ಕೊಟ್ಟಿರುವ ಪದಗಳನ್ನುGlossary. ಗ್ಲಾಸರಿ / ಶಬ್ದ ಕೋಶದಲ್ಲಿ ವಿವರಿಸಲಾಗಿದೆ.



# IWAY (ಐವೇ) ತತ್ವಗಳು

## 1

IWAY (ಐವೇ) ತತ್ವಗಳು ಪರಿಣಾಮಕಾರಿ ನಿತ್ಯಗಟ್ಟಳೆಗಳು ಮತ್ತು ಮುಕ್ತ ವಿಚಾರವಿನಿಮಯಗಳಿಂದ ಬೆಂಬಲಿತವಾಗಿವೆ

## 2

ವ್ಯಾಪಾರವು ಕಾನೂನಾತ್ಮಕವಾಗಿ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸಲ್ಪಡುತ್ತದೆ

## 3

ಮಕ್ಕಳನ್ನು ರಕ್ಷಿಸಲಾಗುತ್ತದೆ ಮತ್ತು ಕಲಿಯುವಿಕೆ ಮತ್ತು ಸಾಂಸಾರಿಕ ಜೀವನಕ್ಕಾಗಿ ಅವಕಾಶಗಳನ್ನು ಪ್ರೋತ್ಸಾಹಿಸಲಾಗುತ್ತದೆ

## 4

ಮೂಲಭೂತ ಕಾರ್ಮಿಕ ಹಕ್ಕುಗಳನ್ನು ಗೌರವಿಸಲಾಗುತ್ತದೆ

## 5

ಕಾರ್ಮಿಕರು ಟೈಮ್ ಆಫ್ ಕೆಲಸ ಹೊಂದಿರುತ್ತಾರೆ, ಅವರಿಗೆ ಜವಾಬ್ದಾರಿಯುತವಾಗಿ ಪಾವತಿ ಮಾಡಲಾಗುತ್ತದೆ ಮತ್ತು ಅವರು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶಗಳನ್ನು ಹೊಂದಿರುತ್ತಾರೆ

## 6

ಕಾರ್ಮಿಕರ' ಆರೋಗ್ಯ ಮತ್ತು ಸುರಕ್ಷತೆಗಳನ್ನು ರಕ್ಷಿಸಲಾಗುತ್ತದೆ

## 7

ಕೆಲಸ ಮತ್ತು ಜೀವನ ಪರಿಸ್ಥಿತಿಗಳು ಸೂಕ್ತವಾಗಿವೆ

## 8

ಭೂಮಿಯನ್ನು ರಕ್ಷಿಸಲಾಗುತ್ತದೆ

## 9

ನೀರು ಮತ್ತು ತ್ಯಾಜ್ಯ ಸೇರಿದಂತೆ ಸಂಪನ್ಮೂಲಗಳನ್ನು ಸಮರ್ಥ ಮತ್ತು ಸುತ್ತು ಮಾರ್ಗದಲ್ಲಿ ನಿರ್ವಹಿಸಲಾಗುತ್ತದೆ

## 10

ಪ್ರಾಣಿಗಳು ಗೌರವಯುತ ಜೀವನ ಜೀವಿಸುತ್ತವೆ



IWAY(ಐವೇ) ಸ್ಟಾಂಡರ್ಡ್

# ಸಾಮಾನ್ಯ ವಿಭಾಗ

*ಎಲ್ಲಾ ಸರಬರಾಜುದಾರರಿಗೆ ಅವಶ್ಯಕತೆಗಳು*

ಈ ದಾಖಲೆಯು IWAY(ಐವೇ)ಯ ಸಾಮಾನ್ಯ ವಿಭಾಗದ, ಆವೃತ್ತಿ 6.0 ರ ಅನುವಾದವಾಗಿದೆ. ಈ ಅನುವಾದವು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಮತ್ತು ಇದನ್ನು ಒಪ್ಪಂದದ ದಾಖಲೆಯಾಗಿ ನೋಡಲಾಗುವುದಿಲ್ಲ.ಇಂಗ್ಲಿಷ್ ಆವೃತ್ತಿಯು ಏಕೈಕ ಅಧಿಕೃತ ದಾಖಲೆಯಾಗಿದ್ದು, ಇತರ ವಿವಾದಗಳು ಮತ್ತು ಭಿನ್ನಾಭಿಪ್ರಾಯಗಳ ವ್ಯತ್ಯಾಸಗಳ ಸಂದರ್ಭದಲ್ಲಿ ಉಲ್ಲೇಖಿಸಬೇಕಾದದ್ದಾಗಿದೆ.

**ಆವೃತ್ತಿ 6.0** ಪ್ರಕಟಣೆ ಸೆಪ್ಟೆಂಬರ್ **2019 -** ©ಇಂಟರ್ **IKEA (**ಐಕಿಯಾ**)** ಸಿಸ್ಟಂಗಳು ಬಿ.ವಿ..**2019**

# 1 IWAY (ಐವೇ) ತತ್ವಗಳು ಪರಿಣಾಮಕಾರಿ ಬೆಂಬಲಿತವಾಗಿವೆ ನಿತ್ಯಗಟ್ಟಳೆಗಳು ಮತ್ತು ಮುಕ್ತ ಮಾತುಕತೆಗಳಿಂದ

**ಕಾರ್ಯಾಚರಣಾ ನಿರ್ವಹಣೆ**

ಮೂಲ( BASIC)

G 1.1 IWAY (ಐವೇ)ಗೆ ಸಂಬಂಧಿಸಿದಂತೆ ಹೊಣೆ ಮತ್ತು ಜವಾಬ್ದಾರಿಯನ್ನು ಒಬ್ಬರಿಗೆ ಅಥವಾ ಹೆಚ್ಚಿನ ಮ್ಯಾನೇಜ್ಮೆಂಟ್-ದರ್ಜೆಯ ಪ್ರತಿನಿಧಿಗಳಿಗೆ ನೀಡಲಾಗಿದೆ.

G 1.2 IWAY (ಐವೇ) ಅವಶ್ಯಕತೆಗಳ ಪಾಲನೆಯನ್ನು ವಿಶ್ಲೇಷಿಸಲು ಆಂತರಿಕ ಲೆಕ್ಕಶೋಧಗಳನ್ನು ಕನಿಷ್ಠ 12 ತಿಂಗಳುಗಳಿಗೆ ಒಂದು ಬಾರಿ ನಡೆಸಲಾಗುತ್ತದೆ.

ಆಧುನಿಕ( ADVANCE)

G 1.3 ಲಿಖಿತ ಕಾರ್ಯನೀತಿಗಳು ಮತ್ತು ನಿತ್ಯಗಟ್ಟಳೆಗಳನ್ನು IWAY (ಐವೇ) ಯಲ್ಲಿ ಒಳಗೊಂಡಿದ್ದು ಅಸ್ತಿತ್ವದಲ್ಲಿದೆ.

G 1.4 ಕಾರ್ಯಾಚರಣೆಗಳನ್ನು ಅಳೆಯಲು ಮತ್ತು ಸುಧಾರಿಸಲು IWAY (ಐವೇ) ಗೆ ಸಂಬಂಧಿಸಿದಂತೆ ಸೂಚಕಗಳು ಮತ್ತು ಯೋಜನೆಗಳು ಅಸ್ತಿತ್ವದಲ್ಲಿವೆ.

**ಸರಬರಾಜು ಸರಪಳಿ ನಿರ್ವಹಣೆ**

ಮೂಲ( BASIC)

G 1.5 IKEA (ಐಕಿಯಾ) ದಲ್ಲಿ ಉತ್ಪನ್ನಗಳು, ಸೇವೆಗಳು, ಸಾಮಗ್ರಿಗಳು ಅಥವಾ ಸಲಕರಣೆಗಳ ಉಪ-ಗುತ್ತಿಗೆದಾರರು ಮೌಲ್ಯ ಸರಪಳಿಗಳನ್ನು IKEA (ಐಕಿಯಾ) ಸಂಸ್ಥೆಯ ನಿರ್ದಿಷ್ಟತೆಗಳ ಅನುಸಾರ ಮ್ಯಾಪ್ ಮಾಡಲಾಗಿದೆ.

G 1.6 IWAY(ಐವೇ)ಉತ್ಪನ್ನ, ಸೇವೆಗಳ ಉಪ-ಗುತ್ತಿಗೆದಾರರಲ್ಲಿ ಜಾರಿಗೊಳಿಸಲಾಗಿದೆ ಮತ್ತು ಪರಿಶೀಲಿಸಲಾಗಿದೆ, IKEA (ಐಕಿಯಾ) ಮೌಲ್ಯ ಸರಪಳಿಯಲ್ಲಿನ ಸಾಮಗ್ರಿ ಅಥವಾ ಸಲಕರಣೆಗಳು, IKEA (ಐಕಿಯಾ) ಸಂಸ್ಥೆಯ ನಿರ್ದಿಷ್ಟತೆಗಳ ಅನುಸಾರ ಇರುತ್ತದೆ.

ಉತ್ಕೃಷ್ಟ( EXCELLENT)

G 1.7 IKEA (ಐಕಿಯಾ) ಮೌಲ್ಯ ಸರಪಳಿಯಲ್ಲಿನ ಸಾಮಾಜಿಕ ಮತ್ತು ಪರಿಸರಾತ್ಮಕ ಅಪಾಯಗಳನ್ನು ಗುರುತಿಸಲಾಗಿದೆ ಮತ್ತು ಅವುಗಳನ್ನು ಪರಿಹರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

## ಕಾರ್ಮಿಕ/ಆಡಳಿತವರ್ಗದ ವಿಚಾರವಿನಿಮಯ

**ಮೂಲ( BASIC )**

G 1.8 ಕಾರ್ಮಿಕರಿಗೆ IWAY (ಐವೇ) ಗೆ ಸಂಬಂಧಿಸಿದಂತೆ ಅವರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.

G 1.9 IWAY (ಐವೇ) ಗೆ ಸಂಬಂಧಿಸಿದಂತೆ ಕಾರ್ಮಿಕರೊಂದಿಗೆ ರಚನಾತ್ಮಕ ಮಾತುಕತೆ ನಡೆಯುತ್ತದೆ.



# 2 ವ್ಯಾಪಾರವನ್ನು ಕಾನೂನಾತ್ಮಕವಾಗಿ ಮತ್ತು ಪ್ರಾಮಾಣಿಕತೆಯಿಂದ ನಡೆಸಲಾಗುವುದು

## ವ್ಯಾಪಾರ ನೈತಿಕತೆ

**ಕಡ್ಡಾಯ( MUST)**

G 2.1 IKEA (ಐಕಿಯಾ) ವ್ಯಾಪಾರಕ್ಕೆ ಸಂಬಂಧಿಸಿದಂತೆ ವಿಶ್ವಾಸ ಮತ್ತು ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗುತ್ತದೆ. ಪ್ರಯತ್ನಗಳಾದ ಕಾನೂನು ಉಲ್ಲಂಘಿಸುವುದು, ಸುಳ್ಳು ದಾಖಲೆಗಳ ಸೃಷ್ಟಿ, ಮೋಸ, ಅಥವಾ ಭ್ರಷ್ಟಾಚಾರದಲ್ಲಿ ತೊಡಗುವುದನ್ನು ಒಪ್ಪಲಾಗುವುದಿಲ್ಲ.

**ಮೂಲ( BASIC)**

G 2.2 IWAY (ಐವೇ) ಗೆ ಸಂಬಂಧಿಸಿದ ಎಲ್ಲಾ ಅನ್ವಯವಾಗುವ ಕಾನೂನುಗಳು, ನಿಯಂತ್ರಣಗಳು ಮತ್ತು ಅಂಗೀಕಾರಗಳನ್ನು ಪಾಲಿಸಲಾಗುವುದು.

# 3 ಮಕ್ಕಳನ್ನು ಹೀಗೆ ರಕ್ಷಿಸಲಾಗುತ್ತದೆ ಮತ್ತು ಕೆಲಸ ಮಾಡಲು, ಕಲಿಯಲು ಮತ್ತು ಪರಿವಾರ ಜೀವನಕ್ಕಾಗಿ ಅವಕಾಶಗಳನ್ನು ಪ್ರೋತ್ಸಾಹಿಸಲಾಗುತ್ತದೆ

## ಮಕ್ಕಳ ರಕ್ಷಣೆ

ಕಡ್ಡಾಯ( MUST)

G 3.1 ಲ್ಲಿ ಬಾಲ ಕಾರ್ಮಿಕರು ಇರುವುದಿಲ್ಲ. ಯಾವುದೇ ಸಂಭವನೀಯ ಅಥವಾ ದೃಢೀಕೃತ ಬಾಲ ಕಾರ್ಮಿಕ ಪ್ರಕರಣವನ್ನು. ತಕ್ಷಣ IKEA (ಐಕಿಯಾ) ಗೆ ವರದಿ ಮಾಡಲಾಗುವುದು.

ಮೂಲ( BASIC)

G 3.2 ಮಕ್ಕಳು ಕನಿಷ್ಠ ಕಾನೂನಾತ್ಮಕ ಉದ್ಯೋಗ ವಯಸ್ಸಿನ ಒಳಗಿನವರು ಕೆಲಸ ಮಾಡುವುದಿಲ್ಲ. ವೃತ್ತಿಪರ ಪ್ರಶಿಕ್ಷಣಾರ್ಥಿಗಳು 14 ವರ್ಷ ವಯಸ್ಸಿನಿಂದ ತರಬೇತಿಯಲ್ಲಿ ಭಾಗವಹಿಸಬಹುದು. ತರಬೇತಿಯು ಅವರ ಶಿಕ್ಷಣಕ್ಕೆ ಸಂಬಂಧಿಸಿರುತ್ತದೆ.

G 3.3 ಮಕ್ಕಳು, ಯುವ ಕಾರ್ಮಿಕರಾಗಿಯೋ ಅಥವಾ ವೃತ್ತಿಪರ ಪ್ರಶಿಕ್ಷಣಾರ್ಥಿಗಳಾಗಿಯೋಅಪಾಯಕಾರಿ ಕೆಲಸ ಅಥವಾ ರಾತ್ರಿಯ ಕೆಲಸಗಳನ್ನು ಮಾಡುವುದಿಲ್ಲ ಅಪಾಯಕಾರಿ ಕೆಲಸ ಅಥವಾ ರಾತ್ರಿಯ ಕೆಲಸಗಳನ್ನು ಮಾಡುವುದಿಲ್ಲ

## ಕೆಲಸ ಮಾಡಲು ಮತ್ತು ಕಲಿಯಲು ಅವಕಾಶಗಳು

ಮೂಲ( BASIC)

G 3.4 ಕೆಲಸದ ಅವಕಾಶಗಳನ್ನು ಯುವ ಕಾರ್ಮಿಕರಿಗೆ ಗುರುತಿಸಲಾಗುತ್ತದೆ ಮತ್ತು ಪ್ರೋತ್ಸಾಹಿಸಲಾಗುತ್ತದೆ.

ಆಧುನಿಕ( ADVANCE)

G 3.5 ವೃತ್ತಿಪರ ತರಬೇತಿ ಅವಕಾಶಗಳನ್ನು ಮಕ್ಕಳಿಗಾಗಿ ಗುರುತಿಸಲಾಗುತ್ತದೆ ಮತ್ತು ಪ್ರೋತ್ಸಾಹಿಸಲಾಗುತ್ತದೆ.

## ಪರಿವಾರದ ಜೀವನಕ್ಕಾಗಿ ಅವಕಾಶಗಳು

ಆಧುನಿಕ(ADVANCE)

G 3.6 ಕಾರ್ಮಿಕರು ಅನ್ವಯವಾಗುವ ಶಾಸನವು ತಿಳಿಸುವುದರ ಜೊತೆಗೆ ಮಕ್ಕಳ ಆರೈಕೆ ಬೆಂಬಲ ಪಡೆಯುತ್ತಾರೆ.



# 4 ಮೂಲಭೂತ ಕಾರ್ಮಿಕ ಹಕ್ಕುಗಳನ್ನು ಗೌರವಿಸಲಾಗುತ್ತದೆ

## ಕಾರ್ಮಿಕ ಸ್ವಾತಂತ್ರ್ಯ

ಕಡ್ಡಾಯ( MUST)

G 4.1 ಅಲ್ಲಿ ಒತ್ತಡದ, ಜೀತದಲ್ಲಿರುವ ಅಥವಾ ಜೈಲು ಕಾರ್ಮಿಕ ಇರುವುದಿಲ್ಲ. ಯಾವುದೇ ಸಂಭವನೀಯ ಅಥವಾ ದೃಢೀಕೃತ ಪ್ರಕರಣವಾದ ಒತ್ತಡದ, ಜೀತದಲ್ಲಿರುವ ಅಥವಾ ಜೈಲು ಕಾರ್ಮಿಕ ಕಂಡಬಂದಲ್ಲಿ ತಕ್ಷಣ IKEA (ಐಕಿಯಾ) ಗೆ ವರದಿ ಮಾಡಲಾಗುತ್ತದೆ.

ಮೂಲ( BASIC)

G 4.2 ಓವರ್ ಟೈಮ್ ಗಂಟೆಗಳು ಸ್ವಯಂಪ್ರೇರಣೆಯಾಗಿದೆ ಮತ್ತು ಕಾರ್ಮಿಕರು ಓವರ್ ಟೈಮ್ ಗಂಟೆಗಳನ್ನು ನಿರಾಕರಿಸಿದರೆ ದಂಡ ವಿಧಿಸುವುದಿಲ್ಲ. ಅನ್ವಯವಾಗುವ ಶಾಸನಗಳಿಂದ ಉತ್ತಮವಾಗಿ ವಿವರಣೆ ನೀಡಿರುವ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ, ಓವರ್ ಟೈಮ್ ಗಂಟೆಗಳು ಅನ್ವಯವಾಗುವೆಡೆ ಕಾರ್ಮಿಕ ಪ್ರಾತಿನಿಧಿತ್ವದ ಮೂಲಕ ಒಪ್ಪಿದರೆ ಅಲ್ಪಾವಧಿಗೆ ಕಡ್ಡಾಯವಾಗಬಹುದು.

## ಸಂಘ ಮತ್ತು ಕುಂದುಕೊರತೆಗಳ ಸ್ವಾತಂತ್ರ್ಯ

ಮೂಲ( BASIC)

G 4.3 ಕಾರ್ಮಿಕರು ಕೆಲಸಕ್ಕೆ ಸಂಬಂಧಿಸಿದ ಸಂಸ್ಥೆಗಳನ್ನು ರಚಿಸಲು ಅಥವಾ ಅದರಲ್ಲಿ ಭಾಗವಹಿಸಲು, (ಅಥವಾ ಭಾಗವಹಿಸದಿರಲು) ಹಾಗೂ ಸಾಮೂಹಿಕ ಸಮಾಲೋಚನೆಯಲ್ಲಿ ತೊಡಗಿಸಿಕೊಳ್ಳಲು ತಮ್ಮ ಅಧಿಕಾರವನ್ನು ಚಲಾಯಿಸಲು ಸ್ವತಂತ್ರರಾಗಿರುತ್ತಾರೆ. ಈ ಅಧಿಕಾರಗಳನ್ನು ತಾರತಮ್ಯ, ಹಿಂಸೆ ಅಥವಾ ಶೋಷಣೆ, ದೈಹಿಕ ಅಥವಾ ಮಾನಸಿಕ ಆಗಿರಬಹುದು, ಇವುಗಳ ಭಯವಿಲ್ಲದೆ ಚಲಾಯಿಸಲಾಗುತ್ತದೆ.

G 4.4 ಕುಂದುಕೊರತೆ ನಿವಾರಣಾ ವ್ಯವಸ್ಥೆಯೊಂದು ಅಸ್ತಿತ್ವದಲ್ಲಿದ್ದು ಕಾರ್ಮಿಕರಿಗೆ ಇದರ ಬಗ್ಗೆ ತಿಳಿದಿರುತ್ತದೆ, ಇದರಿಂದ ಅವರು ಪ್ರತೀಕಾರ ಇಲ್ಲದೆ ತಮ್ಮ ದೂರುಗಳನ್ನು ಎತ್ತಲು ಅಥವಾ ಆತಂಕಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ದೂರುಗಳನ್ನು ದಾಖಲಿಸಲಾಗುತ್ತದೆ ಮತ್ತು ಅವುಗಳ ಮೇಲೆ ಕ್ರಮಗಳನ್ನು ಜರುಗಿಸಲಾಗುತ್ತದೆ ಮತ್ತು ಕಾರ್ಮಿಕರ ಅನಾಮಧೇಯತೆಯನ್ನು ರಕ್ಷಿಸಲಾಗುತ್ತದೆ.

## ನೇಮಕಾತಿ ಮತ್ತು ಉದ್ಯೋಗ ಅಭ್ಯಾಸಗಳು

ಮೂಲ(BASIC)

G 4.5 ನೇಮಕಾತಿ, ಉದ್ಯೋಗ ಅಥವಾ ವಜಾಗೊಳಿಸುವ ಪ್ರಕ್ರಿಯೆಗಳಿಗೆ ಶುಲ್ಕಗಳನ್ನು ಕಾರ್ಮಿಕರಿಗೆ ವಿಧಿಸಲಾಗುವುದಿಲ್ಲ. ಕಾರ್ಮಿಕರನ್ನು ಠೇವಣಿಗಳನ್ನು ಇಡುವಂತೆ ಕೋರಲಾಗುವುದಿಲ್ಲ.

G 4.6 ನೇಮಕಾತಿಗೆ ಸಂಬಂಧಿಸಿದಂತೆ ಲಿಖಿತ ನಿತ್ಯಗಟ್ಟಲೆಯನ್ನು ಜಾರಿಗೊಳಿಸಲಾಗುತ್ತದೆ ಮತ್ತು ಅದು ವಯಸ್ಸು ಪರಿಶೀಲನೆ, ಅಭ್ಯರ್ಥಿಗಳ ಪರೀಕ್ಷೆ ಮತ್ತು ಆಯ್ಕೆ ಮತ್ತು ಕಾರ್ಮಿಕ ನೇಮಕದಾರರನ್ನು ಬಳಸುವ ಸಂಬಂಧಿತ ನಿಯಮಗಳನ್ನು ಒಳಗೊಂಡಿರುತ್ತದೆ.

G 4.7 ಕಾರ್ಮಿಕರು ತಮ್ಮ ಕೆಲಸ ಅಥವ ಪರಿಚಯಾತ್ಮಕ ತರಬೇತಿ, ಯಾವುದು ಮೊದಲು ಬರುತ್ತದೋ ಅದನ್ನು ಪ್ರಾರಂಭಿಸುವ ಮುನ್ನ ಲಿಖಿತ ಉದ್ಯೋಗ ಒಪ್ಪಂದ ಅಥವಾ ತತ್ಸಮಾನವಾದ ದಾಖಲೆಗೆ ಸಹಿ ಹಾಕುವರು. ಕಾರ್ಮಿಕರು ಒಪ್ಪಂದದ ಪ್ರತಿಯೊಂದನ್ನು ಸ್ವೀಕರಿಸುವರು ಮತ್ತು ಸಹಿ ಮಾಡುವ ಮುನ್ನ ಅದರ ಷರತ್ತುಗಳನ್ನು ಅರ್ಥ ಮಾಡಿಕೊಳ್ಳುವರು. ಉದ್ಯೋಗದ ಷರತ್ತುಗಳಲ್ಲಿನ ಗಮನಾರ್ಹ ಬದಲಾವಣೆಗಳನ್ನು ಕಾರ್ಮಿಕರು ಲಿಖಿತ ರೂಪದಲ್ಲಿ ಒಪ್ಪಿಕೊಳ್ಳುವರು.

G 4.8 ಶೂನ್ಯ-ವೇಳೆಗಳು ಒಪ್ಪಂದಗಳನ್ನು ಬಳಸಲಾಗುವುದಿಲ್ಲ.

G 4.9 ಸಂಸ್ಥೆಯಲ್ಲಿ ತಾರತಮ್ಯ, ಶೋಷಣೆ, ವ್ಯಾಪಾರ ನೀತಿ, ಶಿಸ್ತಿನ ಕ್ರಮಗಳು ಮತ್ತು ಆಲ್ಕೋಹಾಲ್ ಮತ್ತ ಮಾದಕ ವಸ್ತುಗಳ ಬಳಕೆಗೆ ಸಂಬಂಧಿಸಿದಂತೆ ನಯಮಗಳನ್ನು ಬರೆಯಲಾಗಿದ್ದು, ಜಾರಿಗೊಳಿಸಲಾಗಿದ್ದು ಮತ್ತು ಕಾರ್ಮಿಕರಿಗೆ ಮಾಹಿತಿ ನೀಡಲಾಗುತ್ತದೆ.

G 4.10 ಶಿಸ್ತಿನ ಕ್ರಮಗಳು ಹೊಡೆಯುವುದೂ ಸೇರಿದಂತೆ ಮಾನಸಿಕ ಅಥವಾ ದೈಹಿಕ ಬಲ ಪ್ರಯೋಗ, ಹಿಂಸೆಯ ಬೆದರಿಕೆಗಳು, ಸಾರ್ವಜನಿಕವಾಗಿ ಎಚ್ಚರಿಸುವುದು ಅಥವ ಶಿಕ್ಷೆಗಳು, ದಂಡಗಳು ಮತ್ತು ಒಪ್ಪಂದದ ಲಾಭಗಳನ್ನು ತೆಗೆದುಹಾಕುವುದನ್ನು ಒಳಗೊಂಡಿರುವುದಿಲ್ಲ. ಕಾರ್ಮಿಕರು  ಶಿಸ್ತಿನ ನಿರ್ಧಾರಗಳ ಸಂಬಂಧದಲ್ಲಿ ನೆರವು ಕೋರಲು ಸ್ವತಂತ್ರರಾಗಿರುತ್ತಾರೆ ಮತ್ತು ಮೇಲ್ಮನವಿ ಸಲ್ಲಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಆಧುನಿಕ(ADVANCE)

G 4.11 ತಾತ್ಕಾಲಿಕ ಕೆಲಸವನ್ನು ನಿರಂತರ ರೀತಿಯ ಕೆಲಸ ಇಲ್ಲದಾಗ ಮಾತ್ರ ಬಳಸಲಾಗುತ್ತದೆ.

G 4.12 ಒಂದು ವೇಳೆ ವಜಾಗೊಳಿಸಿದ ಪ್ರಕರಣಗಳಲ್ಲಿ, ಕಾರ್ಮಿಕರಿಗೆ ಉದ್ಯೋಗದಿಂದ ವಜಾಗೊಳಿಸುವ ಮುನ್ನ ನೋಟೀಸ್ ಅವಧಿಯಾದ ಕನಿಷ್ಠ 10 ದಿನಗಳನ್ನು ನೀಡಲಾಗುತ್ತದೆ.

## ಸಮಾನತೆ, ವೈವಿಧ್ಯತೆ ಮತ್ತು ಸೇರ್ಪಡೆಗೊಳ್ಳುವಿಕೆ

ಮೂಲ(BASIC)

G 4.13 ಕಾರ್ಮಿಕರು ತಾರತಮ್ಯ, ಹಿಂಸೆ ಅಥವಾ ಶೋಷಣೆ, ದೈಹಿಕ ಅಥವಾ ಮಾನಸಿಕ ಎರಡು ರೀತಿಗಳಲ್ಲೂ ಮುಕ್ತರಾಗಿರುತ್ತಾರೆ.

ಆಧುನಿಕ(ADVANCE)

G 4.14 ಪ್ರೋತ್ಸಾಹದಾಯಕ ಕ್ರಮಗಳು ಸಮಾನತೆ, ವೈವಿಧ್ಯತೆ ಮತ್ತು ಒಳಗೊಳ್ಳುವಿಕೆಗಳಿಗಾಗಿ ಜಾರಿಗೊಳಿಸಲಾಗಿದೆ ಮತ್ತು ಆಂತರಿಕವಾಗಿ ಮಾಹಿತಿ ನೀಡಲಾಗಿದೆ.

ಉತ್ಕೃಷ್ಟ(EXCELLENT)

G 4.15 ಲಿಂಗ ಆಧಾರಿತ ವೇತನ ಅಂತರಗಳನ್ನು ವಿಶ್ಲೇಷಿಸಲಾಗುತ್ತದೆ ಮತ್ತು ಅವುಗಳನ್ನು ತೊಡೆದು ಹಾಕಲು ಕ್ರಮಗಳನ್ನು ಜರುಗಿಸಲಾಗುತ್ತದೆ.

G 4.16 ಲಿಂಗ ಆಧಾರಿತ ಸಮತೋಲನವನ್ನು ಮ್ಯಾನೇಜರುಗಳ ಹುದ್ದೆಗಳಿಗೆ ಸಾಧಿಸಲಾಗಿದೆ.

# 5 ಕಾರ್ಮಿಕರು ಹೊಂದಿರುತ್ತಾರೆ ಟೈಮ್ ಆಫ್ ಕೆಲಸ, ಜವಾಬ್ದಾರಿಯುತವಾಗಿ ಪಾವತಿ ಮಾಡಲಾಗುತ್ತದೆ ಮತ್ತು ಅವರು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶ ಹೊಂದಿರುತ್ತಾರೆ

**ಕಾರ್ಯ ವೇಳೆಗಳು ಮತ್ತು ಕೆಲಸದಿಂದ ಬಿಡುವು**

**ಕಡ್ಡಾಯ( MUST)**

G 5.1 ಓವರ್ ಟೈಮ್ ಸೇರಿದಂತೆ ಎಲ್ಲಾ {ಕಾರ್ಯ ವೇಳೆಗಳನ್ನು, ದಾಖಲಿಸಲು ಕಾರ್ಮಿಕರ ವಿಶ್ವಾಸಾರ್ಹ ವ್ಯವಸ್ಥೆಯೊಂದನ್ನು ಜಾರಿಗೊಳಿಸಲಾಗಿದೆ.

**ಮೂಲ( BASIC)**

G 5.2 ಓವರ್ ಟೈಮ್ ಸೇರಿದಂತೆ ಪ್ರತಿ ವಾರದ *ಕೆಲಸದ ಗಂಟೆಗಳು* 60 ಗಂಟೆಗಳನ್ನು ಮೀರುವುದಿಲ್ಲ.

G 5.3 ಕಾರ್ಮಿಕರ ಪ್ರತಿನಿಧಿತ್ವದ ಮೂಲಕ ಲಿಖಿತ ರೂಪದಲ್ಲಿ ಒಪ್ಪಿರದ ಹೊರತು ಕಾರ್ಮಿಕರು ಪ್ರತಿ 4.5 ಗಂಟೆಗಳ ಕೆಲಸ ಮಾಡಿದ ನಂತರ 30 ನಿಮಿಷಗಳ ಕನಿಷ್ಠ ಒಂದು ಬಿಡುವನ್ನು ಹೊಂದುತ್ತಾರೆ.

G 5.4 ಕಾರ್ಮಿಕರು 6 ದಿನಗಳ ಕೆಲಸದ ನಂತರ ಕನಿಷ್ಠ 24 ಸತತ ಗಂಟೆಗಳ ವಿರಾಮ ಪಡೆಯುತ್ತಾರೆ.

**ಆಧುನಿಕ( ADVANCE)**

G 5.5 ಕಾರ್ಮಿಕರು ಈ ಸಂದರ್ಭಗಳಲ್ಲಿ ಕೆಲಸದಿಂದ ಟೈಮ್ ಆಫ್ ಪಡೆಯುವ ಅವಕಾಶ ಹೊಂದಿರುತ್ತಾರೆ ವಿಶಿಷ್ಠ ವೈಯಕ್ತಿಕ ಪರಿಸ್ಥಿತಿಗಳು, ಅನ್ವಯವಾಗುವ ಶಾಸನದಲ್ಲಿ ವಿವರಿಸಿರುವುದರ ಜೊತೆಗೆ.

G 5.6 ನಿಯಮಿತ ಕಾರ್ಯ ಗಂಟೆಗಳು ವಾರಕ್ಕೆ 48 ಗಂಟೆಗಳನ್ನು ಮೀರುವುದಿಲ್ಲ. ಓವರ್ ಟೈಮ್ ಕೆಲಸದ *ಗಂಟೆಗಳು* ವಾರಕ್ಕೆ 12 ಗಂಟೆಗಳನ್ನು ಮೀರುವುದಿಲ್ಲ

**ಉತ್ಕೃಷ್ಟ( EXCELLENT)**

G 5.7 ಓವರ್ ಟೈಮ್ ಅವಲಂಬಿಸದ ರೀತಿಯಲ್ಲಿ ಕೆಲಸವನ್ನು ಯೋಜಿಸಲಾಗುತ್ತದೆ.

## ವೇತನಗಳು ಮತ್ತು ಭತ್ಯೆಗಳು

**ಕಡ್ಡಾಯ( MUST)**

G 5.8 ಕಾರ್ಮಿಕರಿಗೆ ಕನಿಷ್ಠ ಕಾನೂನಾತ್ಮಕ ಕನಿಷ್ಠ ವೇತನವನ್ನು ಪಾವತಿ ಮಾಡಲಾಗುತ್ತದೆ.

**ಮೂಲ( BASIC)**

G 5.9 ಕಾರ್ಮಿಕರಿಗೆ ಉಂಟಾಗುವ ಹೆಚ್ಚುವರಿ ಜೀವನ ವೆಚ್ಚಗಳಿಗೆ ಪರಿಹಾರ ನೀಡುತ್ತದೆ ತಮ್ಮ ಕೆಲಸದ ಮೂಲ ಸ್ಥಳದಿಂದ ಬೇರೆಡೆ ಕೆಲಸ ಮಾಡುವ ಪ್ರಯುಕ್ತ.

G 5.10 ವೇತನಗಳನ್ನು ಒಪ್ಪಂದದ ಷರತ್ತುಗಳ ಅನುಸಾರ, ಸಕಾಲದಲ್ಲಿ ಮತ್ತು ಕನಿಷ್ಠ ಮಾಸಿಕ ಆಧಾರದಲ್ಲಿ ಪಾವತಿಸಲಾಗುತ್ತದೆ.

G 5.11 ಕಾರ್ಮಿಕರು  ವೇತನ ಚೀಟಿಯನ್ನು ಪಡೆಯುತ್ತಾರೆ ಇದರಲ್ಲಿ ಸಂಪೂರ್ಣ ವೇತನ, ಬೆನಿಫಿಟ್-ಗಳು ಮತ್ತು ಕಡಿತಗಳಿಗೆ ಸಂಬಂಧಿಸಿದ ಮಾಹಿತಿ ಇರುತ್ತದೆ, ಇದು ಸ್ವೀಕರಿಸಿದ ವೇತನವನ್ನು ಪ್ರತಿಬಿಂಬಿಸುತ್ತದೆ. ವೇತನ ಚೀಟಿಯಲ್ಲಿ ಒದಗಿಸಿರುವ ಮಾಹಿತಿಯು ಕಾರ್ಮಿಕರಿಗೆ.ಅರ್ಥವಾಗುತ್ತದೆ

G 5.12 ಸಮವಸ್ತ್ರಗಳನ್ನು, ಅಗತ್ಯವಿದ್ದಾಗ, ಸಾಕಷ್ಟು ಪ್ರಮಾಣದಲ್ಲಿ ಮತ್ತು ಉಚಿತವಾಗಿ ನೀಡಲಾಗುತ್ತದೆ. ಸಮವಸ್ತ್ರಗಳ ಸ್ವಚ್ಛತೆ ಮತ್ತು/ಅಥವಾ ಸಂರಕ್ಷಣೆಗೆ ಯಾವುದೇ ಕಡಿತಗಳನ್ನು ಮಾಡುವುದಿಲ್ಲ

**ಆಧುನಿಕ( ADVANCE)**

G 5.13 ಓವರ್ ಟೈಮ್ ಗಂಟೆಗಳಿಗೆ ಪ್ರೀಮಿಯಂ ದರದಲ್ಲಿ ಅಥವಾ ಟೈಮ್ ಆಫ್-ನ ಸಮನಾದ ಮೊತ್ತದ ಮೂಲಕ ಪರಿಹಾರ ನೀಡಲಾಗುತ್ತದೆ.

## ಸಾಮರ್ಥ್ಯ ಅಭಿವೃದ್ಧಿ

**ಮೂಲ( BASIC)**

G 5.14 ಕಾರ್ಮಿಕರು ತಮ್ಮ ಕೆಲಸಗಳನ್ನು ನಿರ್ವಹಿಸುವ ಮುನ್ನ ತುರ್ತುಸ್ಥಿತಿಗಳನ್ನು ನಿರ್ವಹಿಸುವುದು ಹೇಗೆ ಮತ್ತು ತಮ್ಮ ಸ್ಥಾನದ ಜೊತೆಗಿರುವ ಅಪಾಯಗಳ ಬಗ್ಗೆ ಅರಿತಿರುತ್ತಾರೆ.

G 5.15 ಕಾರ್ಮಿಕರು ಅವರು ತಮ್ಮ ಕೆಲಸಗಳನ್ನು ಪೂರೈಸಲು ಅನುವಾಗುವ ತರಬೇತಿ ಮತ್ತು ಇತರ ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.

G 5.16 ಉದ್ಯೋಗ ಪ್ರಶಿಕ್ಷಣಾರ್ಥಿಗಳು 18 ವರ್ಷ ವಯಸ್ಸಿಗಿಂತ ಮೇಲ್ಪಟ್ಟವರು ತರಬೇತಿಯಲ್ಲಿರುವಾಗ ಮಾಡಿದ ಕೆಲಸಕ್ಕೆ ಪರಿಹಾರ ಪಡೆಯುತ್ತಾರೆ. ತರಬೇತಿಯು ಅವರ ಶಿಕ್ಷಣಕ್ಕೆ ಸಂಬಂಧಿಸಿರುತ್ತದೆ.

**ಆಧುನಿಕ( ADVANCE)**

G 5.17 ಉದ್ಯೋಗ ತರಬೇತಿ ಅವಕಾಶಗಳನ್ನು ಗುರುತಿಸಲಾಗುತ್ತದೆ ಮತ್ತು ಪ್ರೋತ್ಸಾಹಿಸಲಾಗುತ್ತದೆ.

G 5.18 ಕಾರ್ಮಿಕರು ತಮ್ಮ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ಅಥವಾ ಸಂಬಂಧಿಸದ ವಿಷಯಗಳಲ್ಲಿ ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶ ಹೊಂದಿರುತ್ತಾರೆ.

# 6 ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಗಳನ್ನು ರಕ್ಷಿಸಲಾಗುತ್ತದೆ

## ವೃತ್ತಿಪರ ಆರೋಗ್ಯ ಮತ್ತು ಸುರಕ್ಷಾ ನಿರ್ವಹಣೆ

**ಕಡ್ಡಾಯ( MUST )**

G 6.1 ಕಾರ್ಮಿಕರನ್ನು ತೀವ್ರತೆರನಾದ ವೃತ್ತಿಪರ ಆರೋಗ್ಯ ಮತ್ತು ಸುರಕ್ಷಾ ಅಪಾಯಗಳಿಗೆ ಒಡ್ಡಲಾಗುವುದಿಲ್ಲ. ಸಾವುಗಳನ್ನು ತಕ್ಷಣವೇ IKEA(ಐಕಿಯಾ)ಗೆ ವರದಿ ಮಾಡಲಾಗುತ್ತದೆ.

G 6.2 ಅಪಘಾತ ವಿಮೆಯನ್ನು ಎಲ್ಲಾ ಕಾರ್ಮಿಕರಿಗೆ ಒದಗಿಸಲಾಗುತ್ತದೆ. ವಿಮೆಯು ಕೆಲಸಕ್ಕೆ ಸಂಬಂಧಿಸಿದ ಗಾಯಗಳು ಮತ್ತು ಕಾಯಿಲೆಗಳನ್ನು ಒಳಗೊಳ್ಳುತ್ತದೆ ಮತ್ತು ಶಾಶ್ವತ ಅಸಮರ್ಥತೆ ಅಥವಾ ಸಾವು ಸಂಭವಿಸುವ ಕೆಲಸಕ್ಕೆ ಸಂಬಂಧಿಸಿದ ಗಾಯಗಳು ಮತ್ತು ಕಾಯಿಲೆಗಳಿಗೆ ಪರಿಹಾರವನ್ನು ನೀಡಲಾಗುತ್ತದೆ.

**ಮೂಲ( BASIC )**

G 6.3 ಮಾನಸಿಕ ಆರೋಗ್ಯ ಮತ್ತು ದಕ್ಷತೆಗೆ ಸಂಬಂಧಿಸಿದ ಅಪಾಯಗಳೂ ಸೇರಿದಂತೆ, ವೃತ್ತಿಪರ ಆರೋಗ್ಯ ಮತ್ತು ಸುರಕ್ಷಾ ಅಪಾಯಗಳನ್ನು ವಿಶ್ಲೇಷಿಸಲಾಗುತ್ತದೆ ಮತ್ತು ಅವುಗಳನ್ನು ನಿವಾರಿಸಲು ಕ್ರಮಗಳನ್ನು ಜರುಗಿಸಲಾಗುತ್ತದೆ.

G 6.4 ಸುರಕ್ಷಾ ಕೆಲಸದ ನಿತ್ಯಗಟ್ಟಳೆಗಳನ್ನು  ಅಪಾಯಕಾರಿ ಕೆಲಸದ.ಜೊತೆ ಸಂಬಂಧಿಸಿದ ಅಪಾಯಗಳನ್ನು ಕನಿಷ್ಠಗೊಳಿಸಲು ಜಾರಿಗೊಳಿಸಲಾಗಿದೆ.

G 6.5 ಉಪಕರಣವು ಸುರಕ್ಷಿತವಾಗಿದೆ ಮತ್ತು ಸುರಕ್ಷಿತ ಸ್ಥಿತಿಯಲ್ಲಿ ಬಳಸಲಾಗುತ್ತದೆ. ಎಚ್ಚರಿಕೆಯ ಚಿಹ್ನೆಗಳು ಮತ್ತು ಸುರಕ್ಷಾ ಮಾಹಿತಿಗಳು ಗೋಚರಿಸುತ್ತವೆ.

G 6.6 ಕಾರ್ಮಿಕರು ಶುಭ್ರವಾಗಿರುವ ವೈಯಕ್ತಿಕ ಸುರಕ್ಷಾ ಉಪಕರಣ ಮತ್ತು ಸುರಕ್ಷಾ ವಸ್ತ್ರವನ್ನು ಧರಿಸುತ್ತಾರೆ, ಇವು ಅವರಿಗೆ ಉಚಿತವಾಗಿ ದೊರೆಯುತ್ತದೆ, ಕಾರ್ಯ ಸ್ಥಿತಿಯಲ್ಲಿ ಇರುತ್ತವೆ ಮತ್ತು ಗುರುತಿಸಿರುವ ಅಪಾಯಕ್ಕೆ.

G 6.7 ವೃತ್ತಿಪರ ಆರೋಗ್ಯ ಮತ್ತು ಸುರಕ್ಷತೆಗ ಸಂಬಂಧಿಸಿದ ಅಪಘಾತಗಳು ಮತ್ತು ಕ್ಷಣದಲ್ಲೆ ತಪ್ಪುವಂತಹವುಗಳನ್ನು ವರದಿ ಮಾಡಲಾಗುತ್ತದೆ, ವಿಶ್ಲೇಷಿಸಲಾಗುತ್ತದೆ ಮತ್ತು ಅವುಗಳ ಮೇಲೆ ಕ್ರಮ ಕೈಗೊಳ್ಳಲಾಗತ್ತದೆ. ಅಪಘಾತಗಳು ಮತ್ತು ಕ್ಷಣದಲ್ಲೆ ತಪ್ಪುವಂತಹದಾಖಲೆಗಳನ್ನು ಇಡಲಾಗುತ್ತದೆ.

G 6.8 ಸುರಕ್ಷತಾ ಅಪಾಯಗಳನ್ನು ನಿರಂತರವಾಗಿ ವರದಿ ಮಾಡಲಾಗುತ್ತದೆ, ವಿಶ್ಲೇಷಿಸಲಾಗುತ್ತದೆ, ಅನುಸರಿಸಲಾಗುತ್ತದೆ ಮತ್ತು ಕ್ರಮ ಜರುಗಿಸಲಾಗುತ್ತದೆ.

## ತರ್ತುಸ್ಥಿತಿ ನಿರ್ವಹಣೆ

ಮೂಲ(BASIC)

G 6.9 ತುರ್ತುಸ್ಥಿತಿಗಳ ಅಪಾಯಗಳನ್ನು ವಿಶ್ಲೇಷಿಸಲಾಗುತ್ತದೆ. ಲಿಖಿತ ತುರ್ತುಸ್ಥಿತಿ ನಿತ್ಯಗಟ್ಟಳೆಗಳನ್ನು ಜಾರಿಗೊಳಿಸಲಾಗುತ್ತದೆ.

G 6.10 ಒಂದು ಸ್ವತಂತ್ರ ರಕ್ಷಣಾ ಅಲಾರಾಂ ಎಲ್ಲಾ ಕಾರ್ಮಿಕರಿಗೆ ಕೇಳಿಸುತ್ತದೆ ಮತ್ತು/ಅಥವಾ ಕಾಣಿಸುತ್ತದೆ . ಅಲಾರಾಂ ಬಟನ್-ಗಳನ್ನು ಕೈಯಿಂದ ಸಕ್ರಿಯಗೊಳಿಸುವುದು ಸಾಧ್ಯ ಮತ್ತು ಅಲಾರಾಂ ಬಟನ್-ಗಳ ಸ್ಪಷ್ಟವಾಗಿ ಗೋಚರಿಸುತ್ತವೆ ಮತ್ತು ಅವುಗಳ ಮೇಲೆ ಗುರುತು ಮಾಡಲಾಗಿದೆ.

G 6.11 ತರ್ತುಸ್ಥಿತಿ ರಕ್ಷಣಾ ಮಾರ್ಗಗಳು ಮತ್ತು ಹೊರದ್ವಾರಗಳು ಯಾವಾಗಲೂ ತ್ವರಿತ ಮತ್ತು ಸುರಕ್ಷಾ ರಕ್ಷಣಾ ಕಾರ್ಯವನ್ನು ಕಾಯ್ದುಕೊಳ್ಳುತ್ತವೆ.

G 6.12 ಕಾರ್ಮಿಕರು ಪ್ರಥಮ ಚಿಕಿತ್ಸೆ ಮತ್ತು ಅಗ್ನಿಶಮನ ಕಾರ್ಯಗಳಲ್ಲಿ ತರಬೇತಿ ಹೊಂದಿದ್ದು ಅವರು ಎಲ್ಲಾ ಕಾರ್ಯಾಚರಣಾ ವೇಳೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೃತ್ತಿಪರ ಅಪಾಯಗಳಿಗೆ ಹೊಂದುವಷ್ಟು ಲಭ್ಯವಿರುತ್ತಾರೆ.

G 6.13 ಪ್ರಥಮ ಚಿಕಿತ್ಸೆ ಮತ್ತು ಅಗ್ನಿಶಮನ ಉಪಕರಣದ ಪ್ರಮಾಣ ಮತ್ತು ವಿಧವು ವೃತ್ತಿಪರ ಅಪಾಯಗಳೊಂದಿಗೆ ಹೊಂದುತ್ತದೆ. ಉಪಕರಣವು ಸದಾಕಾಲ ಕೆಲಸ ಮಾಡುತ್ತದೆ.

G 6.14 ರಕ್ಷಣಾ ಪ್ರಕ್ರಿಯೆಯನ್ನು ಪರೀಕ್ಷಿಸಲು ಮತ್ತು ಯಾವುದೇ ಸುಧಾರಣೆಯ ಅಗತ್ಯವನ್ನು ಗುರುತಿಸಲು ರಕ್ಷಣಾ ಡ್ರಿಲ್-ಗಳನ್ನು ನಡೆಸಲಾಗುತ್ತದೆ. ಡ್ರಿಲ್-ಗಳು ನಡೆಯಬೇಕಾದ ಕಾಲಾವಧಿಯು ವೃತ್ತಿಪರ ಅಪಾಯಗಳ ಅನುಸಾರ ಇರುತ್ತದೆ. ಸಾಧ್ಯವಾದಷ್ಟೂ ಸಂಖ್ಯೆಯ ಕಾರ್ಮಿಕರು ಡ್ರಿಲ್-ಗಳಲ್ಲಿ ಭಾಗವಹಿಸುತ್ತಾರೆ. ರಕ್ಷಣಾ ಡ್ರಿಲ್-ಗಳ ದಾಖಲೆಗಳನ್ನು ಇಡಲಾಗುತ್ತದೆ.

ಆಧುನಿಕ(ADVANCE)

G 6.15 ತುರ್ತುಸ್ಥಿತಿ ಡ್ರಿಲ್-ಗಳನ್ನು ತುರ್ತು ನಿತ್ಯಗಟ್ಟಳೆಗಳನ್ನು ಪರೀಕ್ಷಿಸಲು ಮತ್ತು ಸುಧಾರಣೆಯ ಯಾವುದೇ ಅಗತ್ಯವನ್ನು ಗುರುತಿಸಲು ನಡೆಸಲಾಗುತ್ತದೆ. ತುರ್ತುಸ್ಥಿತಿ ಡ್ರಿಲ್-ಗಳ ದಾಖಲೆಗಳನ್ನು ಇಡಲಾಗುತ್ತದೆ.

G 6.16 ಒಂದು ತುರ್ತುಸ್ಥಿತಿ ಪ್ರತಿಕ್ರಿಯಾ ತಂಡವನ್ನು ನೇಮಿಸಲಾಗಿದ್ದು ಇದು ತುರ್ತುಸ್ಥಿತಿ ಸಂಭವಿಸಿದಲ್ಲಿ ನಿರ್ಧಾರಗಳನ್ನು ಕೈಗೊಳ್ಳುತ್ತದೆ.

ಉತ್ಕೃಷ್ಟ(EXCELLENT)

G 6.17 ಲಿಖಿತ ತುರ್ತುಸ್ಥಿತಿ ನಿತ್ಯಗಟ್ಟಳೆಗಳು ಸಮೀಪದ ಸಂಸ್ಥೆಗಳು ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಹೊಂದಿಕೊಂಡಿವೆ.

## ರಾಸಾಯನಿಕ ನಿರ್ವಹಣೆ

ಮೂಲ(BASIC)

G 6.18 ರಾಸಾಯನಿಕಗಳನ್ನು ಖರೀದಿಸಲಾಗುತ್ತದೆ, ಸಂಗ್ರಹಿಸಲಾಗುತ್ತದೆ, ಸಾಗಿಸಲಾಗುತ್ತದೆ, ನಿರ್ವಹಿಸಲಾಗುತ್ತದೆ ಮತ್ತು ಈ ರೀತಿ ಬಳಸಲಾಗುತ್ತದೆ

ಆಧುನಿಕ(ADVANCE)

G 6.19 ರಾಸಾಯನಿಕ ಅಪಾಯಗಳನ್ನು ವಿಶ್ವಸಂಸ್ಥೆಯ ಗ್ಲೋಬಲ್ ಹಾರ್ಮೋನೈಸಿಂಗ್ ಸಿಸ್ಟಮ್ ಅನುಸಾರ ವಿಶ್ಲೇಷಿಸಲಾಗುತ್ತದೆ ಮತ್ತು ತದನುಸಾರ ಲೇಬಲ್ ಅಂಟಿಸಲಾಗುತ್ತದೆ.

ಉತ್ಕೃಷ್ಟ(EXCELLENT)

G 6.20 ಬದಲಿ ರಾಸಾಯನಿಕಗಳು ಯಾವುವು ಕಾರ್ಮಿಕರು ಮತ್ತು ಪರಿಸರಕ್ಕೆ ಕಡಿಮೆ ಅಪಾಯ ಒಡ್ಡುತ್ತವೆಯೋ ಅವುಗಳನ್ನು ಗುರುತಿಸಲಾಗುತ್ತದೆ ಮತ್ತು ಬಳಸಲಾಗುತ್ತದೆ.

## ಕಟ್ಟಡ ಮತ್ತು ವಿದ್ಯುಚ್ಛಕ್ತಿ ಸುರಕ್ಷತೆ

ಮೂಲ(BASIC)

G 6.21 ರಚನಾ ಸಮಗ್ರತೆಯನ್ನು ಕಾಯ್ದುಕೊಳ್ಳುವ ರೀತಿಯಲ್ಲಿ ಕಟ್ಟಡಗಳನ್ನು ವಿನ್ಯಾಸಿಸಲಾಗುತ್ತದೆ, ನಿರ್ಮಿಸಲಾಗುತ್ತದೆ, ಸಂರಕ್ಷಿಸಲಾಗುತ್ತದೆ ಮತ್ತು ಮಾರ್ಪಾಟು ಮಾಡಲಾಗುತ್ತದೆ.

G 6.22 ವಿದ್ಯುತ್ ವೈರಿಂಗ್, ಲೈಟಿಂಗ್ ಮತ್ತು ಅನಿಲ ಸಾಧನಗಳನ್ನು ಸೂಕ್ತವಾಗಿ ಸಂಸ್ಥಾಪಿಸಲಾಗಿದೆ ಮತ್ತು ಸಂರಕ್ಷಿಸಲಾಗಿದೆ.

## ವೃತ್ತಿಪರ ಆರೋಗ್ಯ ತಪಾಸಣೆಗಳು ಮತ್ತು ಆರೋಗ್ಯ ಚಿಕಿತ್ಸಾ ಬೆಂಬಲ

ಮೂಲ(BASIC)

G 6.23 ಗರ್ಭಾವಸ್ಥೆ ಅಥವಾ ಎಚ್ ಐ ವಿಯಂತಹ ಕೆಲಸಕ್ಕೆ ಸಂಬಂಧಿಸದ ಆರೋಗ್ಯ ತಪಾಸಣೆಗೆ ಬಳಸಲಾಗುವುದಿಲ್ಲ.

ಆಧುನಿಕ(ADVANCE)

G 6.24 ವೃತ್ತಿಪರ ಆರೋಗ್ಯ ತಪಾಸಣೆಗಳನ್ನು ನಿಯಮಿತವಾಗಿ ಕಾರ್ಮಿಕರಿಗೆ ಒದಗಿಸಲಾಗುತ್ತದೆ ಇದರಿಂದ ಕೆಲಸದ ಪರಿಣಾಮವಾಗಿ ಅವರ ಆರೋಗ್ಯದ ಮೇಲೆ ಉಂಟಾಗಬಹುದಾದ ಪ್ರಭಾವವನ್ನು ಗುರುತಿಸಲು ಸಾಧ್ಯವಾಗುತ್ತದೆ. ಆರೋಗ್ಯ ತಪಾಸಣೆಗಳನ್ನು ಒಬ್ಬರು ಆರೋಗ್ಯ ಚಿಕಿತ್ಸಾ ವೃತ್ತಿಪರರು ನಡೆಸುತ್ತಾರೆ. ವರದಿಗಳನ್ನು ಗೌಪ್ಯವಾಗಿ ಇರಿಸಲಾಗುತ್ತದೆ ಮತ್ತು ಅವುಗಳನ್ನು ಆರೋಗ್ಯ ಚಿಕಿತ್ಸಾ ವೃತ್ತಿಪರರು ಕೆಲಸದ ಭಂಗಿಯಲ್ಲಿ ಅಥವಾ ಕೆಲಸದ ಜಾಗದಲ್ಲಿ ಸಂಭಾವ್ಯ ಹೊಂದಾಣಿಕೆಗಳನ್ನು ಶಿಫಾರಸ್ಸು ಮಾಡಲು ಬಳಸುತ್ತಾರೆ.

ಉತ್ಕೃಷ್ಟ(EXCELLENT)

G 6.25 ಕಾರ್ಮಿಕರು ಅನ್ವಯವಾಗವ ಶಾಸನವು ವಿವರಿಸಿರುವುದರ ಜೊತೆಗೆ ಹೆಚ್ಚುವರಿಯಾಗಿ ಆರೋಗ್ಯ ಚಿಕಿತ್ಸಾ ಬೆಂಬಲ ಪಡೆಯುತ್ತಾರೆ.



# 7 ಕಾರ್ಯನಿರ್ವಹಣೆ ಮತ್ತು ಜೀವನ ಸ್ಥಿತಿಗಳು ಸೂಕ್ತವಾಗಿವೆ

## ಕಾರ್ಯ ಸ್ಥಿತಿಗಳು

| | ಮೂಲ(BASIC) | |
|---|---|---|
| G 7.1 | ಕೆಲಸ ಮಾಡುವ ವಾತಾವರಣವು ಸ್ವಚ್ಛ, ನೈರ್ಮಲ್ಯ ಮತ್ತು ಉತ್ತಮವಾಗಿ ಸಂರಕ್ಷಿತವಾಗಿರುತ್ತದೆ ಮತ್ತು ಸಾಕಷ್ಟು ಬೆಳಕು, ಗಾಳಿ ಮತ್ತು ಅಗತ್ಯವಿದ್ದಾಗ, ಶಾಖ ಒದಗಿಸುತ್ತದೆ. | |
| G 7.2 | ಸ್ಥಳಗಳು ಎಲ್ಲಿಕಾರ್ಮಿಕರು ಆಹಾರ ಸೇವಿಸಬಹುದೋ ಮತ್ತು ವಿಶ್ರಮಿಸಬಹುದೋ ಅವು ಲಭ್ಯವಿರುತ್ತವೆ, ಯಾವುದೇ ಅಪಾಯಗಳಿಂದ ದೂರ ಇರುತ್ತವೆ ಮತ್ತು ಅವುಗಳು ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಇರುತ್ತವೆ. | |
| G 7.3 | ಶೌಚಾಲಯಗಳು ಉಚಿತವಾಗಿದ್ದು, ನೈರ್ಮಲ್ಯವನ್ನು ಕಾಪಾಡಿಕೊಂಡಿರುತ್ತವೆ, ಬಳಸಲು ಕಾರ್ಯವೇಳೆಯಲ್ಲಿ, ಲಭ್ಯವಿರುತ್ತವೆ, ಅವುಗಳು ಮೂಲ ಸರಬರಾಜುಗಳನ್ನು ಹೊಂದಿರುತ್ತವೆ ಮತ್ತು ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿರುತ್ತವೆ. | |
| G 7.4 | ಮಿತಿಯಿಲ್ಲದ ಪ್ರಮಾಣದಲ್ಲಿ ಶುದ್ಧವಾದ ಕುಡಿಯುವ ನೀರು ಉಚಿತವಾಗಿ ಲಭ್ಯವಿರುತ್ತದೆ ಮತ್ತು ಕಾರ್ಯಸ್ಥಳದಿಂದ ನ್ಯಾಯಸಮ್ಮತ ಅಂತರದಲ್ಲಿ ಇರುತ್ತವೆ. | |

# 8 ನಮ್ಮ ಗ್ರಹವನ್ನು ರಕ್ಷಿಸಲಾಗುತ್ತದೆ

## ಪರಿಸರ ಪ್ರಭಾವಗಳು

ಕಡ್ಡಾಯ( MUST)

G 8.1 ಇಲ್ಲಿ ಯಾವುದೇ ತೀವ್ರತೆರನಾದ ಪರಿಸರ ಮಾಲಿನ್ಯ ಇರುವುದಿಲ್ಲ. ಯಾವುದೇ ತೀವ್ರ ಪರಿಸರ ಮಾಲಿನ್ಯದ ಪ್ರಕರಣವನ್ನು IKEA (ಐಕಿಯಾ)ಗೆ ವರದಿ ಮಾಡಲಾಗುವುದು.

ಮೂಲ( BASIC)

G 8.2 ಪರಿಸರ ಸಂಬಂಧಿತ ದೂರುಗಳನ್ನು ದಾಖಲಿಸಲಾಗುವುದು ಮತ್ತು ಕ್ರಮ ಜರುಗಿಸಲಾಗುವುದು.

G 8.3 ಪ್ರಸಕ್ತ ಅಥವಾ ಹಿಂದಿನ ಚಟುವಟಿಕೆಗಳ ಕಾರಣ ಭೂಮಿ ಕಲುಷಿತವಾಗುವ ಅಪಾಯವನ್ನು ವಿಶ್ಲೇಷಿಸಲಾಗುವುದು ಮತ್ತು ಕ್ರಮ ಜರುಗಿಸಲಾಗುವುದು.

G 8.4 ಪರಿಸರ ಸಂಬಂಧಿತ ಅಪಾಯಗಳು ಮತ್ತು ಪ್ರಭಾವಗಳನ್ನು ಗುರುತಿಸಲಾಗುವುದು ಮತ್ತು ವಿಶ್ಲೇಷಿಸಲಾಗುವುದು ಇದರಿಂದ ಪರಿಸರ ಕಾರ್ಯಾಚರಣೆಗಳನ್ನು ಸುಧಾರಿಸಲು ಮಾರ್ಗಗಳನ್ನು ಕಂಡುಹಿಡಿಯಲು ನೆರವಾಗುವುದು. ಪರಿಸರ ಸುಧಾರಣಾ ಯೋಜನೆಗಳನ್ನು ಪ್ರತಿ 12 ತಿಂಗಳಿಗೊಮ್ಮೆ ಜಾರಿಗೊಳಿಸಲಾಗುತ್ತದೆ, ಸಮೀಕ್ಷಿಸಲಾಗುತ್ತದೆ ಮತ್ತು ಪರಿಷ್ಕರಿಸಲಾಗುತ್ತದೆ.

ಆಧುನಿಕ( ADVANCE)

G 8.5 ಪರಿಸರದ ಪ್ರಭಾವಗಳನ್ನು ಕಾರ್ಯಾಚರಣಾ ಮತ್ತು ರಚನಾ ಬದಲಾವಣೆಗಳನ್ನು ಮೌಲ್ಯಮಾಪನ ಮಾಡುವಾಗ ವಿಶ್ಲೇಷಿಸಲಾಗುತ್ತದೆ.

## ವಾಯು ಮಾಲಿನ್ಯ ಮತ್ತು ವಾತಾವರಣ

ಮೂಲ( BASIC)

G 8.6 ಪ್ರಸಕ್ತ ಶಕ್ತಿ ಮೂಲಗಳು ಗೊತ್ತಿರುವಂತಹವು ಮತ್ತು ನವೀಕರಿಸಬಹುದಾದ ಶಕ್ತಿಗೆ ಪರಿವರ್ತನೆ ಹೊಂದಬಹುದಾದ ಸಂಭಾವ್ಯ ಮೂಲಗಳನ್ನು ಗುರುತಿಸಲಾಗಿದೆ.

**ಆಧುನಿಕ (ADVANCE)**

G 8.7 ಬಳಸುವ ಎಲ್ಲಾ ವಿದ್ಯುಚ್ಛಕ್ತಿಯು, ಉತ್ಪಾದಿಸಿದ್ದು ಅಥವಾ ಖರೀದಿಸಿದ್ದು,ನವೀಕರಸಬಹುದಾದ ಶಕ್ತಿ ಮೂಲಗಳಿಂದ ಬರುತ್ತದೆ.

G 8.8 ಯಾವುದೇ *ಒಝೋನ್ ಬರಿದಾಗುವ ಅಂಶಗಳು* ಅಥವಾ ಹೈಡ್ರೋಫ್ಲೋರೋಕಾರ್ಬನ್-ಗಳನ್ನು ಬಳಸಲಾಗುವುದಿಲ್ಲ.

G 8.9 ಯಾವುದೇ ಅವಶೇಷ ಕಲ್ಲಿದ್ದಲು ಅಥವಾ ತೈಲ ಆಧಾರಿತ ಇಂಧನಗಳನ್ನು ಪ್ರಾಥಮಿಕ ಶಕ್ತಿ ಮೂಲವಾಗಿ ಕಾರ್ಯಪ್ರದೇಶದಲ್ಲಿ ಬಳಸಲಾಗುವುದಿಲ್ಲ

**ಉತ್ಕೃಷ್ಟ( EXCELLENT)**

G 8.10 ವಾಯು ಮಾಲಿನ್ಯ ಅಂಶಗಳ ಹೊರಸೂಸುವಿಕೆ ಮತ್ತು ಗ್ರೀನ್ ಹೌಸ್ ಅನಿಲಗಳನ್ನು ಶತಮಾನದ ಕೊನೆಯ ಹೊತ್ತಿಗೆ 1.5°C ಗುರಿಯತ್ತ ಸಾಗುತ್ತ, 2°C ಒಳಗೆ ಭೌಗೋಳಿಕ ತಾಪಮಾನ ಹೆಚ್ಚಳವನ್ನು ಮಿತಿಗೊಳಿಸುವ ನಿಟ್ಟಿನಲ್ಲಿ ಕಡಿಮೆ ಮಾಡಲಾಗುವುದು (*ಪ್ಯಾರಿಸ್ ಒಪ್ಪಂದ*ದಲ್ಲಿ ನಿಗಧಿಪಡಿಸಿರುವಂತೆ).

G 8.11 ಬಳಸುವ ಎಲ್ಲಾ ವಿದ್ಯುಚ್ಛಕ್ತಿಯು, ಉತ್ಪಾದಿಸಿದ್ದು ಅಥವಾ ಖರೀದಿಸಿದ್ದು, *ನವೀಕರಿಸಬಹುದಾದ ಶಕ್ತಿ* ಮೂಲಗಳಿಂದ ಬರುತ್ತದೆ.

## ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯತೆ

**ಮೂಲ( BASIC)**

G 8.12 ವ್ಯಾಪಾರ ಚಟುವಟಿಕೆಗಳನ್ನು ಉನ್ನತ ಸಂರಕ್ಷಣಾ ಮೌಲ್ಯ ಪ್ರದೇಶಗಳಲ್ಲಿ IKEA (ಐಕಿಯಾ) ಮಾನ್ಯತೆ ಮಾಡಿರುವ ವ್ಯವಸ್ಥೆಯ ಅನುಸಾರ ದೃಢೀಕರಿಸಿದ ಪ್ರದೇಶವಾದ ಹೊರತು ನಡೆಸಲಾಗುವುದಿಲ್ಲ

**ಆಧುನಿಕ( ADVANCE)**

G 8.13 ಜೈವಿಕ ವೈವಿಧ್ಯತೆಯನ್ನು ಬೆಂಬಲಿಸುವ ಉಪಕ್ರಮಗಳನ್ನು ಜಾರಿಗೊಳಿಸಲಾಗುತ್ತದೆ.



# 9 ಸಂಪನ್ಮೂಲಗಳು, ನೀರು ಮತ್ತು ತ್ಯಾಜ್ಯವೂ ಸೇರಿದಂತೆ, ಸಮರ್ಥನೀಯ ಮತ್ತು ವೃತ್ತಾಕಾರದ ಮಾರ್ಗದಲ್ಲಿ ನಿರ್ವಹಿಸಲಾಗುತ್ತದೆ

## ನೀರು

ಮೂಲ( BASIC)

G 9.1 ಯಾವ ವಿಧದ ಒಳ ಬರುವ ನೀರನ್ನು ಬಳಸಲಾಗುತ್ತಿದೆ ಮತ್ತು ಹೇಗೆ, ಎಲ್ಲಿ ಮತ್ತು ಯಾರಿಂದ ತ್ಯಾಜ್ಯನೀರನ್ನು ಸಂಸ್ಕರಿಸಲಾಗುತ್ತಿದೆ ಎಂಬ ಮಾಹಿತಿಯು ಲಭ್ಯವಿರುತ್ತದೆ.

ಆಧುನಿಕ( ADVANCE)

G 9.2 ನೀರನ್ನು ಕಾರ್ಯಾಚರಣೆಗಳಲ್ಲಿ ಬಳಸುತ್ತಿದ್ದಲ್ಲಿ, ಬಳಕೆಯನ್ನು ಕಡಿಮೆ ಮಾಡಲು ಲಭ್ಯವಿರುವ ಅವಕಾಶಗಳು ಮತ್ತು ನೀರಿನ ಹೊರಹರಿವುಗಳನ್ನು ಗುರುತಿಸಲಾಗುತ್ತದೆ ಮತ್ತು ಜಾರಿಗೊಳಿಸಲಾಗುತ್ತದೆ.

ಉತ್ಕೃಷ್ಟ( EXCELLENT)

G 9.3 ನೀರನ್ನು ಕಾರ್ಯಾಚರಣೆಗಳಲ್ಲಿ ಬಳಸುತ್ತಿದ್ದಲ್ಲಿ, ಹೆಚ್ಚಿನ ಗುಣಮಟ್ಟದ ನೀರಿನ ಬಳಕೆಯನ್ನು ಮಿತಿಗೊಳಿಸುವ ಸಾಧ್ಯತೆಗಳನ್ನು ಗುರುತಿಸಲಾಗುತ್ತದೆ. ಹೆಚ್ಚಿನ ಗುಣಮಟ್ಟದ ನೀರಿನ, ಬಳಕೆಯನ್ನು ಮಿತಿಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ, ಇದರಿಂದ ಸುಧಾರಣೆಗಳು ಉಂಟಾಗುತ್ತವೆ.

## ತ್ಯಾಜ್ಯ ನಿರ್ವಹಣೆ

**ಮೂಲ( BASIC )**

G 9.4 ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತದೆ, ನಿರ್ವಹಿಸಲಾಗುತ್ತದೆ, ಸಾಗಿಸಲಾಗುತ್ತದೆ ಮತ್ತು ವಿಲೇವಾರಿ ಮಾಡಲಾಗುತ್ತದೆ, ಇದನ್ನು ಮಾಡುವ ವಿಧಾನವು ಕಾರ್ಮಿಕರಮತ್ತು ಪರಿಸರದ ಆರೋಗ್ಯ ಮತ್ತು ಸುರಕ್ಷೆಯನ್ನು ರಕ್ಷಿಸುತ್ತದೆ. ಕಾರ್ಯಪ್ರದೇಶದಲ್ಲಿ ಯಾವುದೇ ತ್ಯಾಜ್ಯವನ್ನು ಭೂಮಿಯಲ್ಲಿ ಹುದುಗಿಸುವುದಿಲ್ಲ. ಅಪಾಯಾಕಾರೀ ಮತ್ತು ಅಪಾಯಕಾರಿ ಅಲ್ಲದ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಇರಿಸಲಾಗುತ್ತದೆ.

G 9.5 ತ್ಯಾಜ್ಯವನ್ನು ಕಾರ್ಯಪ್ರದೇಶದಲ್ಲಿ, ಶಕ್ತಿ ಉತ್ಪಾದನೆಯನ್ನು ಹೊರತುಪಡಿಸಿ ಸುಡಲಾಗುವುದಿಲ್ಲ.

G 9.6 ದಾಖಲೆಗಳು ಲಭ್ಯವಿರುತ್ತವೆ ಹೇಗೆ, ಎಲ್ಲಿ, ಎಷ್ಟು ಮತ್ತು ಯಾರಿಂದ ತ್ಯಾಜ್ಯವು ಸಂಸ್ಕರಿಸಲ್ಪಟ್ಟಿತು.

G 9.7 ನಿರಾಕರಿಸಲು, ಕಡಿಮೆ ಮಾಡಲು, ಪುನ: ಬಳಸಲು, ಮತ್ತು ರೀಸೈಕಲ್ ಮಾಡುವ ಅವಕಾಶಗಳನ್ನು ಗುರುತಿಸಲಾಯಿತು ಮತ್ತು ಜಾರಿಗೊಳಿಸಲ್ಪಟ್ಟಿತು.

**ಆಧುನಿಕ( ADVANCE )**

G 9.8 ಯಾವುದೇ ತ್ಯಾಜ್ಯವನ್ನು ಭೂಮಿಯಲ್ಲಿ ತುಂಬಲು ಕಳುಹಿಸಲಾಗುವುದಿಲ್ಲ.

**ಉತ್ಕೃಷ್ಟ( EXCELLENT)**

G 9.9 ಎಲ್ಲಾ ತ್ಯಾಜ್ಯಗಳನ್ನು ಪುನ: ಬಳಕೆ ಮಾಡಲಾಗುತ್ತದೆ ಅಥವಾ ರೀಸೈಕಲ್ ಮಾಡಲಾಗುತ್ತದೆ.



# ಗ್ಲಾಸರಿ / ಶಬ್ದ ಕೋಶ

***ಅಪಘಾತ***

ಗಾಯ, ಕಾಯಿಲೆ ಅಥವಾ ಸಾವು ಸಂಭವಿಸುವ ಅನಿರೀಕ್ಷಿತವಾಗಿ ಮತ್ತು ಉದ್ದೇಶರಹಿತವಾಗಿ ಜರುಗುವ ಒಂದು ಘಟನೆ.

***ಮೂಲ ಸ್ಥಳ***

ಉದ್ಯೋಗ ಒಪ್ಪಂದದಲ್ಲಿ ವಿವರಿಸಿರುವ ಸ್ಥಳ. ಇದು ನಿಯಮಿತ ಕಾರ್ಯಸ್ಥಳ ಅಥವಾ ಒಪ್ಪಂದವು ಸಂಪರ್ಕಿತವಾಗಿರುವ ಕಛೇರಿಗೆ ಇರುತ್ತದೆ.

***ವ್ಯಾಪಾರ ನೀತಿ***

ವ್ಯಾಪಾರ ಮಾಡುವಾಗ ಯಾವುದು ನೈತಿಕವಾಗಿ ಸರಿ ಅಥವಾ ತಪ್ಪು ಎಂದು ನಿರ್ಧರಿಸಲು ಇರುವ ನಿಯಮಗಳು, ತತ್ವಗಳು ಮತ್ತು ಮಾನಕಗಳು.

***ಮಕ್ಕಳು***

18 ವರ್ಷದೊಳಗಿನ ವ್ಯಕ್ತಿಗಳು, ಕಾನೂನಿನ ಅಂತರ್ಗತ ಮಗುವಿಗೆ, ಮುಂಚೆಯೆ ವಯಸ್ಕರ ಸ್ಥಾನ ಲಭಿಸಿದ ಹೊರತು.

***ಬಾಲ ಕಾರ್ಮಿಕರು***

ಕೆಲಸ ನಿರ್ವಹಿಸುತ್ತಿರುವ ಮಕ್ಕಳು  ಕನಿಷ್ಟ ಕಾನೂನಾತ್ಮಕವಾಗಿ ಕೆಲಸ ಮಾಡುವ ವಯಸ್ಸಿನೊಳಗಿನವರು ಅವರ ಬಾಲ್ಯ, ಸಾಮರ್ಥ್ಯ ಮತ್ತು ಘನತೆಯನ್ನು ಕಸಿದುಕೊಳ್ಳುವ ಮತ್ತು ಅವರ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಪಾಯಕಾರಿ ಆಗುವಂತಹುದು. ಮೇಲಾಗಿ, 18 ವರ್ಷದೊಳಗಿನ ಯಾವುದೇ ವ್ಯಕ್ತಿಯು ಮಾಡಿರುವ ಕೆಲಸವನ್ನು "ಬಾಲ ಕಾರ್ಮಿಕರು", ಎಂಬುದಾಗಿ ಮಾಡಿರುವ ಕೆಲಸದ ವಿಧ ಮತ್ತ ಗಂಟೆಗಳು ಮತ್ತು ಯಾವ ಪರಿಸ್ಥಿತಿಗಳಲ್ಲಿ ಆ ಕೆಲಸವನ್ನು ಮಾಡಲಾಯಿತು ಎಂಬುದರ ಆಧಾರದ ಮೇಲೆ ಪರಿಗಣಿಸಬಹುದು.

***ಸಾಮೂಹಿಕ ಸಮಾಲೋಚನೆ***

ಉದ್ಯೋಗಸ್ಥರು ಮತ್ತು ಕಾರ್ಮಿಕರಿಂದ  ಮುಕ್ತವಾಗಿ ಮತ್ತು ಸ್ವತಂತ್ರವಾಗಿ ಆರಿಸಿರುವ ಕಾರ್ಮಿಕ ಪ್ರತಿನಿಧಿಗಳ ನಡುವಣ ಸಮಾಲೋಚನೆಗಳು.

***ತಾರತಮ್ಯ***

ಕೆಲಸ ಮಾಡುವ ಅವರ ಸಾಮರ್ಥ್ಯಕ್ಕೆ ಸಂಬಂಧಪಡದ ಕಾರಣಗಳ ಮೇಲೆ ತುಲನಾತ್ಮಕ ಪರಿಸ್ಥಿತಿಯಲ್ಲಿ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬರಿಗಿಂತ ಕಡಿಮೆ ಪರವಾಗಿ ಪರಿಗಣಿಸಿದಾಗ ತಾರತಮ್ಯ ಸಂಭವಿಸುತ್ತದೆ.

ತಾರತಮ್ಯದ ಕಾರಣಗಳಲ್ಲಿ ಅವರು ಕೆಲಸ ಮಾಡುವ ಸಾಮರ್ಥ್ಯಕ್ಕೆ ಯಾವುದೇ ಸಂಬಂಧ ಹೊಂದಿರದ ವಯಸ್ಸು, ಲಿಂಗ ಗುರುತು, ಲೈಂಗಿಕ ನಿಲುವು, ಮಾನಸಿಕ ಅಥವಾ ದೈಹಿಕ ಅಸಮರ್ಥತೆ, ಜನಾಂಗೀಯತೆ, ರಾಷ್ಟ್ರೀಯತೆ, ಧರ್ಮ, ವೈವಾಹಿಕ ಅಥವಾ ಪರಿವಾರದ ಸ್ಥಾನಮಾನ ಅಥವಾ ಇನ್ನಾವುದೇ ಆಯಾಮವು ಸೇರಿರುತ್ತದೆ.

***ವಜಾ ಮಾಡುವಿಕೆ***

ಉದ್ಯೋಗಸ್ಥರು ಅಧಿಕೃತವಾಗಿ ಯಾವುದೇ ಕಾರಣಕ್ಕೆ ಒಬ್ಬರನ್ನು ಉದ್ಯೋಗವನ್ನು ಬಿಟ್ಟು ಹೋಗುವಂತೆ ಮಾಡುವ ಪರಿಸ್ಥಿತಿ, ಒಪ್ಪಿದ ಶಿಸ್ತಿನ ಪ್ರಕ್ರಿಯೆ ಅಥವಾ ಕಾರ್ಮಿಕರು ಅದನ್ನು ಪ್ರಶ್ನಿಸದ ಅಥವಾ ಅಧಿಕಾರಿಗಳಿಂದ ದೃಢೀಕರಿಸಿರುವುದನ್ನು ಹೊರತುಪಡಿಸಿ. ಇದರಲ್ಲಿ ಕಾರ್ಮಿಕರನ್ನು ಲೇ ಆಫ್ ಅಥವಾ ರಿಡಂಡೆಂಟ್ ಎಂದು ಪರಿಗಣಿಸಿದ ಪ್ರಕರಣಗಳೂ ಸೇರಿವೆ.

***ವೈವಿಧ್ಯತೆ***

ವೈವಿಧ್ಯತೆ ವಯಸ್ಸು, ಲಿಂಗ ಗುರುತು, ಲೈಂಗಿಕ ನಿಲುವು, ಮಾನಸಿಕ ಅಥವಾ ದೈಹಿಕ ಅಸಮರ್ಥತೆ, ಜನಾಂಗೀಯತೆ, ರಾಷ್ಟ್ರೀಯತೆ, ಧರ್ಮ, ವೈವಾಹಿಕ ಅಥವಾ ಪರಿವಾರದ ಸ್ಥಾನಮಾನ ಸೇರಿದಂತೆ ಜನರ ನಡುವೆ ಇರುವ ಹೋಲಿಕೆಗಳು ಮತ್ತು ವ್ಯತ್ಯಾಸಗಳಿಗೆ ಸಂಬಂಧಿಸುತ್ತದೆ.

***ತುರ್ತು ನಿರ್ಗಮನ***

ಒಂದು ತುರ್ತು ನಿರ್ಗಮನ ವನ್ನು ದೀಪಗಳಿಂದ ಅಥವಾ ಫೋಟೋ ಲ್ಯೂಮಿನೆಸೆಂಟ್ ಚಿಹ್ನೆಯ ಮೂಲಕ ಸೂಚಿಸಲಾಗುತ್ತದೆ. ನಿರ್ಗಮನವು ಹೊರಭಾಗಕ್ಕೆ ತೆಗೆದುಕೊಳ್ಳುತ್ತದೆ, ಅದನ್ನು ಬೀಗ ಹಾಕದೆ ಬಿಡಲಾಗುತ್ತದೆ ಮತ್ತು ಯಾವಾಗಲೂ ಅದರ ಎದುರು ಯಾವುದೇ ಅಡಚಣೆ ಇರುವುದಿಲ್ಲ.

***ತುರ್ತು ಪ್ರತಿಕ್ರಿಯಾ ತಂಡ***

ಕಾರ್ಮಿಕರ ತಂಡವು ತುರ್ತುಸ್ಥಿತಿಗೆ ಪ್ರತಿಕ್ರಿಯಿಸುವುದನ್ನು ಸಂಘಟಿಸುವ ಸೂಕ್ತ ಸಾಮರ್ಥ್ಯ ಹೊಂದಿರುವುದು: ತುರ್ತುಸ್ಥಿತಿಯ ವಿಶ್ಲೇಷಣೆ, ತ್ವರಿತ ನಿರ್ಧಾರ ಕೈಗೊಳ್ಳುವಿಕೆ, ಸ್ಥಳೀಯ ಅಧಿಕಾರಿಗಳಿಗೆ ಬೆಂಬಲ ಮತ್ತು ತುರ್ತು ಸೇವೆಗಳು, ಮತ್ತು ಬಾಹ್ಯ ಮತ್ತು ಆಂತರಿಕ ಸಂವಹನೆ.

***ತುರ್ತು ಮಾರ್ಗ***

ತುರ್ತು ನಿರ್ಗಮನದ ಕಡೆಗೆ ಸಾಗುವ ಮಾರ್ಗ. ಮಾರ್ಗವನ್ನು ಯಾವಾಗಲೂ ಅಡಚಣೆ ಇಲ್ಲದೆ ಇಟ್ಟಿರಲಾಗುತ್ತದೆ.

***ಸಮಾನತೆ***

ಸಮಾನತೆ ಎಂದರೆ ಪ್ರತಿಯೊಬ್ಬರನ್ನೂ ಅವರ ಹಿನ್ನೆಲೆ ಮತ್ತು ಅವರ ವೈಯಕ್ತಿಕ ವ್ಯತ್ಯಾಸಗಳನ್ನು ಪರಿಗಣಿಸದೆ ನ್ಯಾಯಸಮ್ಮತವಾಗಿ ಕಾಣಲಾಗುತ್ತದೆ ಮತ್ತು ಸಮಾನ ಅವಕಾಶಗಳನ್ನು ನೀಡಲಾಗುತ್ತದೆ ಎಂದರ್ಥ. ಸಮಾನತೆ ಯಾವುದೇ ತೆರನಾದ ತಾರತಮ್ಯದ ಅನುಪಸ್ಥಿತಿ ಎಂದೂ ಅರ್ಥವಾಗುತ್ತದೆ.

***ಒತ್ತಾಯದ, ಜೀತದ ಅಥವಾ ಜೈಲು ಕಾರ್ಮಿಕ***

ಒತ್ತಾಯದ ಕಾರ್ಮಿಕ ಯಾವುದೇ ಕೆಲಸ ಅಥವಾ ಸೇವೆ ಮಾಡಿರುವ ಯಾವುದೇ ದಂಡ ಎದುರಿಸುವ ಕಾಟ ಅಥವಾ ಬೆದರಿಕೆಗೆ ಒಳಗಾಗಿರುವ ಮತ್ತು ತನ್ನ ಸ್ವಂತ ಮುಕ್ತ ಇಚ್ಛೆಯ ಮೇರೆಗೆ ಒಪ್ಪಿರದ ವ್ಯಕ್ತಿ. ಇದರಲ್ಲಿ ವೈಯಕ್ತಿಕ ವಸ್ತುಗಳನ್ನು ವಶಪಡಿಸಿಕೊಳ್ಳುವಿಕೆ, ಯಾವುದೇ ಸಮಯದಲ್ಲಿ ಉದ್ಯೋಗವನ್ನು ರದ್ದುಪಡಿಸಲು ಅಸಮರ್ಥರಾಗಿರುವುದು ಮತ್ತು ಕಾರ್ಯಸ್ಥಳವನ್ನು ಬಿಟ್ಟುಹೋಗಲು ಅಸಮರ್ಥರಾಗಿರುವುದು ಸೇರಿರುತ್ತದೆ.

ಜೀತದಾಳು ಒಂದು ವಿಧದ ಒತ್ತಾಯದ ಕಾರ್ಮಿಕ ಇದರಲ್ಲಿ ಕಾರ್ಮಿಕರು ನೇಮಕಾತಿ ಶುಲ್ಕ ಅಥವಾ ವೆಚ್ಚಗಳು, ಠೇವಣಿಗಳ ಪಾವತಿ, ಸಾಲ ಅಥವಾ ಮುಂಗಡ ವೇತನದ ರೂಪದಲ್ಲಿ ಸಾಲ ಪಡೆಯುವುದು ಅಥವಾ ವಿಳಂಬದ ಪಾವತಿ ಹೊಂದಿರುವುದು ಮುಂತಾದ ಪ್ರತ್ಯಕ್ಷ ಅಥವಾ ಪರೋಕ್ಷವಾದ ಶುಲ್ಕ ವಿಧಿಸುವ ಪರಿಣಾಮ ಸಾಲದ ಬದ್ಧತೆಯ ಮೂಲಕ ಅವರ ಕೆಲಸದಲ್ಲಿ ಮುಂದವರೆಯಲು ಬದ್ಧರಾಗಿರುತ್ತಾರೆ.

ಜೈಲು ಕಾರ್ಮಿಕ ಖೈದಿಗಳು ನಿರ್ವಹಿಸುವ ಕೆಲಸ.

***ಮೂಲಭೂತ ಕಾರ್ಮಿಕ ಹಕ್ಕುಗಳು***

IWAY(ಐವೇ) ಉದ್ದೇಶಕ್ಕಾಗಿ, ಮೂಲಭೂತ ಕಾರ್ಮಿಕ ಹಕ್ಕುಗಳಲ್ಲಿ ಒತ್ತಾಯದ ಮತ್ತು ಜೀತದಾಳು ವಿರುದ್ಧದ ಸ್ವಾತಂತ್ರ್ಯ, -ತಾರತಮ್ಯ- ಏತರ, ಸಂಘದ ಸ್ವಾತಂತ್ರ್ಯ ಮತ್ತು ಸಾಮೂಹಿಕ ಸಮಾಲೋಚನೆಯ ಹಕ್ಕು ಸೇರಿವೆ.

***ಲಿಂಗ ಸಮತೋಲನ***

ಲಿಂಗ ಸಮತೋಲನವು ಪುರುಷರು ಮತ್ತು ಮಹಿಳೆಯರ ಸಮಾನ ಅನುಪಾತವನ್ನು ಉಲ್ಲೇಖಿಸುತ್ತದೆ.

***ಹಸಿರುಮನೆ ಅನಿಲಗಳು***

ಏಳರಲ್ಲಿ ಯಾವುದೇ ಹಸಿರುಮನೆ ಅನಿಲಗಳು ಕ್ಯೋಟೋ ಪ್ರೊಟೋಕಾಲ್ ವಿವರಿಸಿರುವಂತೆ, ಅದರ ಹೊರಸೂಸುವಿಕೆಯು ವಾತಾವರಣ ಬದಲಾವಣೆಗೆ ಕೊಡುಗೆ ನೀಡುತ್ತದೋ ಅದು: ಇಂಗಾಲಾಮ್ಲ ($CO_2$), ಮಿಥೇನ್ ($CH_4$), ನೈಟ್ರಸ್ ಆಕ್ಸೈಡ್ ($N_2O$), ಸಲ್ಫರ್ ಹೆಕ್ಸಾಫ್ಲೋರೈಡ್ ($SF_6$), ಹೈಡ್ರೋಫ್ಲೋರೋಕಾರ್ಬನ್ಸ್ (HFCs), ನೈಟ್ರೋಜೆನ್ ಟ್ರೈಫ್ಲೋರೈಡ್ ($NF_3$), ಮತ್ತು ಪರ್ಫ್ಲೋರೋಕಾರ್ಬನ್ಸ್ (PFCs). ಈ ಅನಿಲಗಳು ಸೂರ್ಯನ ಶಾಖವನ್ನು ಹಸಿರು ಮನೆಯ ತರಹ ಹಿಡಿದಿಟ್ಟುಕೊಳ್ಳುವ ಮೂಲಕ ಭೌಗೋಳಿಕ ತಾಪಮಾನಕ್ಕೆ ಕೊಡುಗೆ ನೀಡುತ್ತವೆ - ಗ್ರೀನ್ ಹೌಸ್ ಪರಿಣಾಮ ಎಂದು ಕರೆಯಲ್ಪಡುತ್ತದೆ.

***ಅಪಾಯ***

ಜೀವ, ಆರೋಗ್ಯ ಅಥವಾ ಪರಿಸರಕ್ಕೆ ಒಂದು ಮಟ್ಟದ ಬೆದರಿಕೆ ಒಡ್ಡುವ ಪರಿಸ್ಥಿತಿ. ಇದು ಭೌತಿಕ, ರಾಸಾಯನಿಕ, ಜೈವಿಕ, ದಕ್ಷತಾ ಅಥವಾ ವೃತ್ತಿಪರ ಅಪಾಯಗಳನ್ನು ಒಳಗೊಂಡಿರಬಹುದು.

***ಅಪಾಯಕಾರೀ ಕೆಲಸ***

ಕೆಲಸವೊಂದರಲ್ಲಿ ಕಾರ್ಮಿಕರು ಅಪಾಯಗಳಿಗೆ ಒಡ್ಡಿಕೊಳ್ಳುವುದು.

***ಉನ್ನತ ಸಂರಕ್ಷಣಾ ಮೌಲ್ಯ***

ಕ್ಷೇತ್ರಗಳು ಹೈ ಕನ್ಸರ್ವೇಶನ್ ವಾಲ್ಯೂ ರಿಸೋರ್ಸ್ ನೆಟ್ವರ್ಕ್ ವಿವರಿಸುವಂತೆ ಜೈವಿಕ, ಪರಿಸರಾತ್ಮಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಮೌಲ್ಯಗಳು ರಾಷ್ಟ್ರೀಯ, ಪ್ರಾದೇಶಿಕ ಅಥವಾ ಜಾಗತಿಕ ಮಟ್ಟದಲ್ಲಿ ಸರ್ವಶೇಷ್ಠವಾಗಿ ಗಮನಾರ್ಹ ಅಥವಾ ಸಂಕೀರ್ಣವಾಗಿ ಪ್ರಮುಖವಾಗಿವೆ.

***ಉನ್ನತ ಗುಣಮಟ್ಟದ ನೀರು***

ಭೌತಿಕ, ರಾಸಾಯನಿಕ, ಜೈವಿಕ ಗುಣಲಕ್ಷಣಗಳು ಹೊಂದುವ ಅಥವಾ ಕುಡಿಯುವ ನೀರಿಗೆ ಸಮೀಪವಾಗಿರುವ ನೀರು.

***ಹೈಡ್ರೋಫ್ಲೋರೋಕಾರ್ಬನ್ಸ್***

ಹೈಡ್ರೋಫ್ಲೋರೋಕಾರ್ಬನ್ಸ್ (HFCs) ಮನುಷ್ಯ-ನಿರ್ಮಿತ ಫ್ಲೋರಿನೇಟೆಡ್ ಹಸಿರುಮನೆ ಅನಿಲಗಳು. ಅವುಗಳನ್ನು ಪದೇಪದೇ ಏಯರ್ ಕಂಡೀಷನಿಂಗ್, ರೆಫ್ರಿಜರೇಶನ್, ಫೋಮ್ ಬ್ಲೋಯಿಂಗ್, ಬೆಂಕಿ ನಿರೋಧಕಗಳು, ದ್ರಾವಣಗಳು ಮತ್ತು ಏರೋಸಾಲ್ಸ್-ಗಳಲ್ಲಿ ಒಜೋನ್ ಬರಿದಾಗಿಸುವ ಅಂಶಗಳ ಬದಲಿ ವಸ್ತುಗಳಾಗಿ ಬಳಸಲಾಗುತ್ತದೆ.

***ಸೇರ್ಪಡೆಗಳಿಸುವಿಕೆ***

ಸೇರ್ಪಡೆಗೊಳಿಸುವಿಕೆ ಎಂದರೆ ವೈವಿಧ್ಯತೆಯನ್ನು ನ್ಯಾಯಸಮ್ಮತ, ಆರೋಗ್ಯಪೂರ್ಣ, ಮತ್ತು ಉನ್ನತ ಮಟ್ಟದ ಕಾರ್ಯಾಚರಣಾ ಸಂಸ್ಥೆ ಅಥವಾ ಸಮುದಾಯ ರಚನೆಗೆ ಬಳಸಕೊಳ್ಳುವುದು. ಒಂದು ಸೇರ್ಪಡೆಗೊಂಡ ಪರಿಸರವು ಸಂಪನ್ಮೂಲಗಳು ಮತ್ತು ಅವಕಾಶಗಳಿಗೆ ಎಲ್ಲರೂ ಸಮನಾದ ಅವಕಾಶ ಹೊಂದಿರುವುದನ್ನು ಖಚಿತಪಡಿಸಿಕೊಳ್ಳುತ್ತದೆ. ಅದು ವ್ಯಕ್ತಿಗಳು, ಗುಂಪುಗಳು ಅವರು ಏನಾಗಿರುವರೋ ಮತ್ತು ಸಾಂಸ್ಥಿಕ ಮತ್ತು ಸಾಮಾಜಿಕ ಗುರಿಗಳತ್ತ ಅವರ ಕೊಡುಗೆಗಳಿಗಾಗಿ ಸುರಕ್ಷಿತ, ಗೌರವಯುತ, ಕಾರ್ಯನಿರತ, ಪ್ರೋತ್ಸಾಹಿತ, ಮತ್ತು ಮೌಲ್ಯಯುತ ಭಾವನೆ ಹೊಂದಲು ಅನುವಾಗುತ್ತದೆ.

***ಜೀವನ ವೆಚ್ಚಗಳು***

ಆಹಾರದಂತಹ ಜೀವನದ ಮೂಲ ಅಗತ್ಯತೆಗಳಿಗೆ ಸಂಬಂಧಿಸಿದ ವೆಚ್ಚಗಳು, ನೀರು, ನೆರಳು ಮತ್ತು ವಸ್ತ್ರ

***ಕನಿಷ್ಠ ಕಾನೂನಾತ್ಮಕವಾಗಿ ಕೆಲಸ ಮಾಡುವ ವಯಸ್ಸು***

ಸೇವೆ ಒದಗಿಸುವ ಯಾವುದೇ ಅಸ್ತಿತ್ವ ಅಥವಾ ವ್ಯಕ್ತಿಯು, ಶಾಸನ ಮತ್ತು ವ್ಯಕ್ತಿಯೊಬ್ಬರನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳಬಹುದಾದ ವಯಸ್ಸಿನವರು. ಭಾಗವಾಗಿ.

***ಕ್ಷಣದಲ್ಲಿ ತಪ್ಪಿದ್ದು***

A ಕ್ಷಣದಲ್ಲಿ ತಪ್ಪಿದ್ದು ಗಾಯ ಅಥವಾ ಕಾಯಿಲೆ ಸಂಭವಿಸದ - ಆದರೆ ಹಾಗಾಗಬಹುದಾದ ಸಂಭವ ಇದ್ದ ಯೋಜಿಸದ ಘಟನೆ. ಘಟನೆಗಳ ಸರಪಳಿಯಲ್ಲಿ ಕೇವಲ ಅದೃಷ್ಟವಶಾತ್ ಉಂಟಾದ ಕಡಿತವು ಗಾಯ ಅಥಾ ಕಾಯಿಲೆಯನ್ನು ತಡೆಗಟ್ಟಿತು.

***ನೋಟೀಸ್ ಅವಧಿ***

ವಜಾ ನೋಟೀಸ್ ಮತ್ತು ಕಡೆಯ ಕೆಲಸದ ದಿನದ ನಡುವಣ ಕಾಲಾವಧಿ. ಈ ನೋಟೀಸ್ ಅವಧಿ ಯಲ್ಲಿ ಪಾವತಿಯನ್ನು ಕಾರ್ಮಿಕರ ಒಪ್ಪಂದದ ಅನುಸಾರ ಮಾಡಲಾಗುತ್ತದೆ.

***ಒಝೋನ್ ಬರಿದಾಗುವ ಅಂಶಗಳು***

ಮೇಲ್ಭಾಗದ ವಾಯುಮಂಡಲದಲ್ಲಿ ಭೂಮಿಯ ರಕ್ಷಣಾತ್ಮಕ ಒಝೋನ್ ಪದರವನ್ನು ನಾಶ ಮಾಡುವ ರಾಸಾಯನಿಕಗಳು. ಅವುಗಳಲ್ಲಿ ಒಝೋನ್ ಬರಿದಾಗುವಿಕೆಗೆ ಜವಾಬ್ದಾರಿ ಆಗಿರುವ ಇತರ ಮನುಷ್ಯ ನಿರ್ಮಿತ ಅಂಶಗಳ ಜೊತೆ ಕ್ಲೋರೋಫ್ಲೋರೋಕಾರ್ಬನ್ಸ್ (CFCs), ಹೈಡ್ರೋಕ್ಲೋರೋ-ಫ್ಲೋರೋಕಾರ್ಬನ್ಸ್ (HCFCs), ಮತ್ತು ಹೇಲನ್ಸ್ ಸೇರಿವೆ. ಈ ಒಝೋನ್ ಬರಿದಾಗಿಸುವ ಅಂಶಗಳು ಮಾಂಟ್ರಿಯಲ್ ಪ್ರೊಟೋಕಾಲ್ ಅನುಸಾರ ನಿಯಂತ್ರಿಸಲ್ಪಟ್ಟಿವೆ.

***ಪ್ಯಾರಿಸ್ ಒಪ್ಪಂದ***

2020ರಲ್ಲಿ ಪ್ರಾರಂಭವಾಗುವ, ಹಸಿರುಮನೆ-ಅನಿಲ-ಹೊರಸೂಸುವಿಕೆ ನಿವಾರಣೆ, ಅಳವಡಿಸಕೊಳ್ಳುವಿಕೆ, ಮತ್ತು ವಾತಾವರಣ ಬದಲಾವಣೆ ಕುರಿತ ಹಣಕಾಸು ಮೇಲಿನ ವಿಶ್ವಸಂಸ್ಥೆ ಫ್ರೇಮ್ವರ್ಕ್ ಕನ್ವೆನ್ಷನ್ ಒಳಗಿನ ಒಪ್ಪಂದ.

***ವೇತನಚೀಟಿ***

ಭೌತಿಕ ಅಥವಾ ವಿದ್ಯುನ್ಮಾನ ಸೂಚನೆ ಒಬ್ಬ ಕಾರ್ಮಿಕರಿಗೆ ವೇತನ ಅವಧಿಯ ಅಂತ್ಯದಲ್ಲಿ ಕೊಟ್ಟಿದ್ದು, ಇದರಲ್ಲಿ ಪರಿಹಾರದ ಅಂಶಗಳನ್ನು ಸ್ಪಷ್ಟವಾಗಿ ತಿಳಿಸಲಾಗುತ್ತದೆ. ಇದು ವೇತನಗಳು, ಭತ್ಯೆಗಳು, ಇನ್ಸೆಂಟಿವ್ಸ್/ಬೋನಸ್-ಗಳು ಮತ್ತು ಯಾವುದೇ ಕಡಿತಗಳ ನಿಖರವಾದ ಮೊತ್ತಗಳನ್ನು ಒಳಗೊಂಡಿರುತ್ತದೆ.

***ನವೀಕರಿಸಬಹುದಾದ ಶಕ್ತಿ***

ಮಾನವ ಸಮಯ-ಪಟ್ಟಿಯಲ್ಲಿ ಸ್ವಾಭಾವಿಕವಾಗಿ ಪುನ: ತುಂಬುವ ನವೀಕರಿಸಬಹುದಾದ ಫಾಸಿಲ್ ಎನರ್ಜಿ ಅಲ್ಲದ ನವೀಕರಿಸಬಹುದಾದ ಮೂಲಗಳ ಎಲ್ಲಾ ಶಕ್ತಿ ಮೂಲಗಳು. ನವೀಕರಿಸಬಹುದಾದ ಶಕ್ತಿ ಕೆಳಕಂಡ ಶಕ್ತಿ ಮೂಲಗಳನ್ನು ಒಳಗೊಂಡಿರುತ್ತದೆ: ಗಾಳಿ, ಸೌರ, ಜಲವಿದ್ಯುತ್, ಜೈವಿಕ ಇಂಧನಗಳು, ಜಲಶಾಖೋತ್ಪನ್ನ ಮತ್ತು ಸಾಗರ (ಅಲೆ ಮತ್ತು ಉಬ್ಬರ) ಮತ್ತು ಭೂಶಾಖೋತ್ಪನ್ನ ಶಕ್ತಿ. ಅದು ಅಣು ಶಕ್ತಿ ಅಥವಾ ಫಾಸಿಲ್ ಇಂಧನಗಳನ್ನು ಒಳಗೊಂಡಿರುವುದಿಲ್ಲ

***ನಿತ್ಯಗಟ್ಟಳೆಗಳು***

ಕಾರ್ಯವೊಂದನ್ನು ಸಾಧಿಸಲು ವಿನ್ಯಾಸಿಸಿರುವ ಕ್ರಿಯೆಗಳ ಒಂದು ಸೆಟ್. ನಿರ್ದಿಷ್ಟಪಡಿಸಿದ ಹೊರತು, ನಿತ್ಯಗಟ್ಟಳೆಗಳು ಅಲಿಖಿತ ಆಗಿರಬಹುದು.

***ತೀವ್ರ ಪರಿಸರಾತ್ಮಕ ಮಾಲಿನ್ಯ***

ಪರಿಸರ ಮಾಲಿನ್ಯವು ಸರಿಪಡಿಸಲಾಗದ, ಧೀರ್ಘಕಾಲೀನ ಅಥವಾ ವ್ಯಾಪಕವಾದ ಪರಿಸರವ್ಯವಸ್ಥೆಯ ಅಡಚಣೆ ಅಥವಾ ಕಾರ್ಯಪ್ರದೇಶದಿಂದ ವ್ಯಾಪಕವಾಗಿ ಹರಡುವ ನಿರೀಕ್ಷೆ ಇರುವುದು.

***ತೀವ್ರ ವೃತ್ತಿಪರ ಆರೋಗ್ಯ ಮತ್ತು ಸುರಕ್ಷಾ ಅಪಾಯಗಳು***

ಆರೋಗ್ಯ ಮತ್ತು ಸುರಕ್ಷತೆ ಅಪಾಯಗಳು ತಕ್ಷಣದಲ್ಲಿ ಮುಂದಿಡುವ ನಿರೀಕ್ಷೆಯಿರುವ  ಸಾವು, ಶಾಶ್ವತ ಗಾಯ ಅಥವಾ ಕಾಯಿಲೆ ಉಂಟುಮಾಡುವ ಅಪಾಯ.

***ಸಬ್-ಕಾಂಟ್ರಾಕ್ಟರ್***

ಉತ್ಪನ್ನ ಅಥವಾ ಸೇವೆ ಒದಗಿಸುವ ಯಾವುದೇ ಅಸ್ತಿತ್ವ ಅಥವಾ ವ್ಯಕ್ತಿಯು, ಶಾಸನ ಮತ್ತು ವ್ಯಕ್ತಿಯೊಬ್ಬರನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳಬಹುದಾದ ವಯಸ್ಸಿನವರು. IKEA (ಐಕಿಯಾ) ಸಾಮಗ್ರಿ ಅಥವಾ ಸಲಕರಣೆ IKEA(ಐಕಿಯಾ)ದ ಮೌಲ್ಯ ಸರಪಳಿ ಭಾಗವಾಗಿ.

***ಸರಬರಾಜುದಾರರು***

IKEA (ಐಕಿಯಾ) ಉತ್ಪನ್ನಗಳು, ಸೇವೆಗಳು, ಸಾಮಗ್ರಿಗಳು ಅಥವಾ ಸಲಕರಣೆಗಳ ಸರಬರಾಜಿಗಾಗಿ ಒಂದು ಸಂಸ್ಥೆಯೊಡನೆ ಹೊಂದಿರುವ ಒಪ್ಪಂದ ಮತ್ತು ಹಾಗೂ ಈ ಒಪ್ಪಂದಕ್ಕೆ ಯಾವುದೇ ಉಪ-ಗುತ್ತಿಗೆದಾರರು . ಈ ದಾಖಲೆಯ ಉದ್ದೇಶಕ್ಕೆ, ಸರಬರಾಜುದಾರರು ಅನ್ವಯವಾಗುವುದು ಸರಬರಾಜುದಾರರು, ಸೇವೆ ಒದಗಿಸುವವರು ಮತ್ತು ಇತರ ಗುತ್ತಿಗೆ ಮಾಡಿಕೊಂಡಿರುವ ಪಕ್ಷಗಳು.

***ತಾತ್ಕಾಲಿಕ ಕೆಲಸ***

ಸೀಮಿತ ಅವಧಿಯ ಕೆಲಸ. ಒಪ್ಪಂದದ ಅಂತ್ಯವು ವಸ್ತುನಿಷ್ಠ ಷರತ್ತುಗಳಿಂದ ನಿರ್ಧರಿಸಲ್ಪಡುತ್ತದೆ., ಉದಾ: ಒಂದು ನಿರ್ದಿಷ್ಟ ದಿನಾಂಕ, ಒಂದು ನಿರ್ದಿಷ್ಟ ಕೆಲಸ ಪೂರ್ಣಗೊಳಿಸುವಿಕೆ, ಅಥವಾ ಒಂದು ನಿರ್ದಿಷ್ಟ ಸಂದರ್ಭದ ಮೂಡುವಿಕೆ. ತಾತ್ಕಾಲಿಕ ಕೆಲಸ ಪೂರ್ಣ ಸಮಯ ಅಥವಾ ಬಿಡುವಿನ ವೇಳೆಯಲ್ಲಿ ಇರಬಹುದು ಮತ್ತು ಅದು ಪರಸ್ಪರವಾಗಿರಬಹುದು (ಎರಡು ಪಕ್ಷಗಳ ನಡುವೆ) ಅಥವಾ ತ್ರಿಕೋನವಾಗಿರಬಹುದು (3 ಪಕ್ಷಗಳ ನಡುವೆ).

***ಮೌಲ್ಯ ಸರಪಳಿ***

ಒಂದು ಉತ್ಪನ್ನ ಅಥವಾ ಸೇವೆಯನ್ನು ಅದರ ಮೂಲ ಕಲ್ಪನೆಯಿಂದ ಅಂತಿಮ ಬಳಕೆದಾರರವರೆಗೆ ತಲುಪಿಸಲು ಮತ್ತು ಮೌಲ್ಯ ಸರಪಳಿ ಯಲ್ಲಿ ಪುನ: ಅದನ್ನು ಸೇರಿಸಲು. ಅವಶ್ಯವಿರುವ ಸಂಪೂರ್ಣ ಶ್ರೇಣಿಯ ಚಟುವಟಿಕೆಗಳು. ಇದು ವಿನ್ಯಾಸ, ಉತ್ಪಾದನೆ, ಹಂಚಿಕೆ ಮತ್ತು ಗ್ರಾಹಕರಿಗೆ ಬೆಂಬಲದಂತಹ ಚಟುವಟಿಕೆಗಳನ್ನು ಒಳಗೊಂಡಿದೆ. ವಿವಿಧ ಹಂತಗಳ ಮೌಲ್ಯ ಸರಪಳಿ, ಯಲ್ಲಿ ಶ್ರೇಯಾಸಕ್ತರು ಉತ್ಪನ್ನ ಅಥವಾ ಸೇವೆಗೆ ಅದರ ಅಂತಿಮ ಮೌಲ್ಯವನ್ನು ಹೆಚ್ಚಿಸಲು ಮೌಲ್ಯ ಸೇರ್ಪಡೆ ಮಾಡುತ್ತಾರೆ.

***ವೃತ್ತಿಪರ ತರಬೇತಿ***

ಕಲಿಯುವ ಧೇಯೋದ್ದೇಶಗಳನ್ನು ಹೊಂದಿರುವ ಎಲ್ಲಾ ವಿಧವಾದ ಅಪ್ರೆಂಟಿಸ್ಶಿಪ್-ಗಳು, ಇಂಟರ್ನ್ಶಿಪ್-ಗಳು ಮತ್ತು ಕೆಲಸದ ಅನುಭವವನ್ನು ಒಳಗೊಂಡಿರುತ್ತದೆ. ವೃತ್ತಿಪರ ತರಬೇತಿ ಯನ್ನು ವೃತ್ತಿಯೊಂದರ ಪ್ರಶಿಕ್ಷಣಾರ್ಥಿಯ ಆಯ್ಕೆಯನ್ನು ಅಥವಾ ತರಬೇತಿ ವಿಧಾನವೊಂದನ್ನು ಬೆಂಬಲಿಸಲು ವಿನ್ಯಾಸಿಸಿರುವ ಸ್ಥಳೀಯ ಶಾಲೆ ಅಥವಾ ತರಬೇತಿ ಸಂಸ್ಥೆ, ಅಥವಾ ಸಮರ್ಥ ಅಧಿಕಾರಶಕ್ತಿಯಿಂದ ಅಂಗೀಕಾರ ಪಡೆದಿರುವ ತರಬೇತಿ ಕಾರ್ಯಕ್ರಮ, ಅಥವಾ ಒಂದು ಮಾರ್ಗದರ್ಶನದ ಉದ್ದೇಶ ಹೊಂದಿರುವ ಅಥವಾ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

***ಕಾರ್ಮಿಕ***

ಪೂರ್ಣ ಸಮಯ ಅಥವಾ ಭಾಗಶ: ಸಮಯ ಕೆಲಸ ನಿರ್ವಹಿಸುತ್ತಿರುವ ಒಬ್ಬ ವ್ಯಕ್ತಿ. ಇದರಲ್ಲಿ ಪೀಸ್ ರೇಟ್ ಕಾರ್ಮಿಕರು, ವೃತ್ತಿಪರ ಪ್ರಶಿಕ್ಷಣಾರ್ಥಿಗಳು ಮತ್ತು ಕಾರ್ಮಿಕರು ಪ್ರೊಬೆಶನರಿ ಅವಧಿಯಲ್ಲಿ ಸಾಗುತ್ತಿರುವವರು, ಹಾಗೂ ಉಪ-ಗುತ್ತಿಗೆದಾರರ ಕಾರ್ಮಿಕರು ಕಾರ್ಯಪ್ರದೇಶದಲ್ಲಿ ವಾರಕ್ಕೆ ಹದಿನೆಂಟು (18) ಗಂಟೆಗಳು ಅಥವಾ ಹೆಚ್ಚು ಕೆಲಸ ಮಾಡುತ್ತಿರುವವರು ಸೇರಿರುತ್ತಾರೆ.

***ಕೆಲಸದ ಗಂಟೆಗಳು***

ಒಬ್ಬರು ಕಾರ್ಮಿಕರು ಕೆಲಸ ಮಾಡುತ್ತಿರುವ ಅವಧಿ. ಅವುಗಳಲ್ಲಿ ಪಾವತಿಸಿದ ವಾರ್ಷಿಕ ರಜೆ, ಪಾವತಿಸಿದ ಸಾರ್ವಜನಿಕ ರಜಾದಿನಗಳು, ಪಾವತಿಸಿದ ಕಾಯಿಲೆ ರಜೆ, ಭೋಜನ ವಿರಾಮಗಳು, ಮನೆಯಿಂದ ಕೆಲಸಕ್ಕೆ ಮತ್ತು ವಾಪಸ್ಸು ಪ್ರಯಾಣಿಸಲು ವಿನಿಯೋಗಿಸಿದ ಸಮಯದಂತಹವುಗಳಿಗೆ ಪಾವತಿ ಮಾಡಿದ್ದರೂ ಸಹ ಕೆಲಸ ಮಾಡದ ಸಮಯವನ್ನು ಹೊರತುಪಡಿಸುತ್ತವೆ.

***ಯುವ ಕಾರ್ಮಿಕ***

18 ವರ್ಷದೊಳಗಿನ ವ್ಯಕ್ತಿಗಳು, ಆದರೆ ಕಾನೂನಾತ್ಮಕವಾಗಿ ಕೆಲಸ ಮಾಡಬಹುದಾದ ವಯಸ್ಸಿಗಿಂತ ಮೇಲ್ಪಟ್ಟ ಕಾರ್ಯನಿರತ ವ್ಯಕ್ತಿಗಳು.

***ಶೂನ್ಯ-ವೇಳೆ ಒಪ್ಪಂದ***

ಇದು ಉದ್ಯೋಗಸ್ಥರು ಕಾರ್ಮಿಕರಿಗೆ ಸತತವಾಗಿ ಕೆಲಸ ನೀಡಬೇಕೆಂಬ ಬಂಧನ ಹೇರದ ಆದರೆ ಕಾರ್ಮಿಕರು ಕೆಲಸ ಲಭ್ಯವಾದಾಗ ಕರೆಯ ಮೇರೆಗೆ ಕೆಲಸ ಮಾಡಬೇಕಾಗುವ ಒಂದು ಉದ್ಯೋಗ ಒಪ್ಪಂದ.



<ಹಿಂದಕ್ಕೆ ವಿಷಯಗಳಿಗೆ

**IWAY STANDARD - EDITION 6.0 PUBLISHED SEPTEMBER 2019 - © Inter IKEA Systems B.V. 2019**

**(ಐವೇ ಸ್ಟಾಂಡರ್ಡ್ – ಆವೃತ್ತಿ 6.0 /© ಇಂಟರ್ ಐಕಿಯಾ ಸಿಸ್ಟಂಗಳು ಬಿ.ವಿ.2019)**